ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-17 ಸಂಚಿಕೆ-8 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀಶಾರದಾ ಮಂಟಪದಲ್ಲಿ ನಾಗರಪಂಚಮಿ ಹಾಗೂ ವರಮಹಾಲಕ್ಷ್ಮೀ ವ್ರತ







ಆಷಾಢ ಮಾಸ ಕಳೆದಂತೆ ಹಬ್ಬಗಳ ಸರಣಿ ಆರಂಭವಾಗುತ್ತದೆ. ಈ ಹಬ್ಬಗಳ ಸರಣಿಯಲ್ಲಿ ಮೊದಲಿಗೆ ಬರುವುದು ನಾಗರಪಂಚಮಿ. ನಾಗರಪಂಚಮಿ ನಾಡಿಗೆ ದೊಡ್ಡದು ಎಂಬ ಹಾಡಿದೆ. ತುಳುನಾಡಿನಲ್ಲಂತು ನಾಗದೇವರು ಭಯ ಹಾಗೂ ಭಕ್ತಿಯಿಂದ ಪೂಜೆಗೊಳ್ಳುವ ದೇವರು. ಅಂತೆಯೇ ಶ್ರೀಶಾರದಾಮಂಟಪದ ಆವರಣದಲ್ಲಿರುವ ನಾಗದೇವರ ಗುಡಿಯಲ್ಲೂ ನಾಗರಪಂಚಮಿಯನ್ನು ಶ್ರದ್ಧಾಭಕ್ತಿಯಿಂದ 28–07–2017ರಂದು ಆಚರಿಸಲಾಯಿತು. ಇದರ ಹಿಂದಿನ ಆದಿತ್ಯವಾರ ತಾ.16.7.2017 ರಂದು ಯುವವೇದಿಕೆಯ ಕಾರ್ಯಕರ್ತರು ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ನಾಗನಗುಡಿ ಹಾಗೂ ಶ್ರೀ ಶಾರದಾ ದೇವಸ್ಥಾನದ ಸುತ್ತಲಿನ ಆವರಣವನ್ನು ಗುಡಿಸಿ ತೊಳೆದು ಸ್ವಚ್ಛಗೊಳಿಸಿದ್ದರು. ತಾ 28.07.2017 ರಂದು ಬೆಳಿಗ್ಗೆ ಸಂಘದ ಅಧ್ಯಕ್ಷರಾದ ಶ್ರೀ ವೈ ಭುವನೇಂದ್ರರಾಯರ ನೇತೃತ್ವದಲ್ಲಿ ಪ್ರಭಾರ ಕೋಶಾಧಿಕಾರಿಗಳಾದ ಶ್ರೀ ಐ.ಕೆ.ಜಯಚಂದ್ರ ರಾಯರೊಂದಿಗೆ ನಾಗದೇವರಿಗೆ ತನುಸೇವೆ ಅರ್ಪಿಸಿ ಸಮಾಜಭಾಂಧವರ ಶ್ರೆಯೋಭಿವೃದ್ಧಿಗಾಗಿ ಪ್ರಾರ್ಥಿಸಲಾಯಿತು. ನೆರೆದಿದ್ದ ನೂರಾರು ಸಮಾಜಬಾಂಧವರು ಹಾಗೂ ಪರಿಸರದ ಭಕ್ತರೂ ತನುಸೇವೆ ಸಮರ್ಪಿಸಿದರು. ಮಧ್ಯಾಹ್ನ ದೇವಸ್ಥಾನದಲ್ಲಿ ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ತಾ.04.08.2017ರ ಸಂಜೆ ವರ ಮಹಾಲಕ್ಷ್ಮಿ ವ್ರತದ ಸಂಭ್ರಮ. ಮಹಿಳಾವೇದಿಕೆಯ ಸದಸ್ಯೆಯರು ಹಾಗೂ ಭಜನಾಮಂಡಳಿಯ ಸದಸ್ಯೆಯರು ಸುಮಾರು ಎಪ್ಪತ್ತು ಜನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ತಾ.04.08.2017ನೇ ಶುಕ್ರವಾರ ಬೆಳಗ್ಗಿನಿಂದಲೇ ಉಪವಾಸವಿದ್ದು ವ್ರತವನ್ನು ಆಚರಿಸಿದರು. ಬ್ರಹ್ಮಶ್ರೀ ನಾಗಭೂಷಣ ಶಾಸ್ತ್ರಿಯವರು ಪೂಜಾ ವಿಧಿಗಳನ್ನು ನೆರವೇರಿಸಿದರು. ಶ್ರೀ ಎಂ.ಎ ಕೃಷ್ಣ ರಾವ್ ಹಾಗೂ ಶ್ರೀಮತಿ ಶಕುಂತಲಾ ದಂಪತಿಗಳು ಪೂಜಾಕತೃವಾಗಿ ಸಹಕರಿಸಿದರು.

## ಚಾತುರ್ಮಾಸ್ಯ ಪ್ರಯುಕ್ತ ಹೆಬ್ಬೂರು ಶ್ರೀ ಶ್ರೀಗಳ ಭೇಟಿ



ತುಮಕೂರು ಜಿಲ್ಲೆಯ ಹೆಬ್ಬೂರಿನ ಘನಪುರಿ ಸಂಸ್ಥಾನದ ಕೋದಾಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರನ್ನು ಚಾತುರ್ಮಾಸದ ಸಂದರ್ಭದಲ್ಲಿ ಭೇಟಿಯಾಗಿ ಆಶೀರ್ವಾದ ಪಡೆಯಲು ಹಾಗೂ ಶ್ರೀ ಕ್ಷೇತ್ರದಲ್ಲಿ ಲೋಕಕಲ್ಯಾಣಾರ್ಥವಾಗಿ ನಡೆಯುತ್ತಿದ್ದ ಋಕ್ಸಂಹಿತಾ ಯಾಗದ ಪೂರ್ಣಾಹುತಿಯಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಉಡುಪಿಯಿಂದ ಸಂಘದ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರ ನೇತೃತ್ವದಲ್ಲಿ ಸಮಾಜಬಾಂಧವರು ತಾ 23–07–2017ನೇ ರವಿವಾರ ಹೆಬ್ಬೂರಿಗೆ ತೆರಳಿದರು. ಶ್ರೀ ಶ್ರೀ ಗಳನ್ನು ಭೇಟಿಯಾಗಿ ಆಶೀರ್ವಾದ ಮಂತ್ರಾಕ್ಷತೆ ಪಡೆದು ಋಕ್ಸಂಹಿತಾಯಾಗದ ಪ್ರಸಾದಭೋಜನ ಸ್ವೀಕರಿಸಿ ಭೋಜನಾನಂತರ ಹಿಂದಿರುಗಿದರು. ಅಂದು ಮುಂಬಯಿ, ಮೈಸೂರು, ಬೆಂಗಳೂರು, ಪುತ್ತೂರು, ಮಂಗಳೂರು ಇತ್ಯಾದಿ ಕಡೆಗಳಿಂದ ನೂರಾರು ಸಮಾಜಬಾಂಧವರು ಆಗಮಿಸಿದ್ದರು.

### ಪ್ರಕಟಣೆ

**ತಾ.30-09-2017ನೇ ಶನಿವಾರ ವಿಜಯದಶಮಿಯ ಪ್ರಯುಕ್ತ ಶ್ರೀಶಾರದಾ ಮಂಟಪದಲ್ಲಿ ನಡೆಯಲಿರುವ ಚಂಡಿಕಾಹೋಮಕ್ಕೂ, ಅಂದು ಜರಗಲಿರುವ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಸಮಾಜ ಬಾಂಧವರೆಲ್ಲರಿಗೂ ಆದರದ ಸ್ವಾಗತ. ಸ್ಪರ್ಧೆಯ ವಿವರಗಳನ್ನು 3ನೇ ಪುಟದಲ್ಲಿ ಗಮನಿಸಬೇಕಾಗಿ ವಿನಂತಿ.** –ಆಡಳಿತ ಮಂಡಳಿ

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

### ಪ್ರಕಟಣೆ

ಆತ್ಮೀಯ ಸಮಾಜ ಬಾಂಧವರೇ,

ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.01-09-2017ನೇ ಶುಕ್ರವಾರ ಸಮಯ : ಸಂಜೆ 5-00 ಗಂಟೆಗೆ

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.20-08-2017ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-00 ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿಗಳು (9036443884), ಮೆನೇಜರ್ (9448108920, 0820-2520754) ಅಥವಾ ವಸಂತರಾವ್ ಕರಂಬಳ್ಳಿ (9632291183) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.
ಅಂದಾಜು ಖರ್ಚು ರೂ.350/-

### ಋಗುಪಾಕರ್ಮ

ತಾ.04-09-2017ನೇ ಸೋಮವಾರ
ಸಮಯ : ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

### ನವರಾತ್ರಿ ಹಾಗೂ ವಿಜಯದಶಮಿ

ತಾ.21-09-2017ನೇ ಗುರುವಾರದಿಂದ ತಾ.29-09-2017ನೇ ಶುಕ್ರವಾರ (ನವರಾತ್ರಿ)
ಹಾಗೂ ತಾ.30-09-2017ನೇ ಶನಿವಾರ (ವಿಜಯದಶಮಿ)

ಶ್ರೀ ಕೆ. ಸುರೇಶ್ ರಾವ್ – ಕಾರ್ಯದರ್ಶಿ
ಶ್ರೀ ಐ.ಕೆ. ಜಯಚಂದ್ರ ರಾವ್ – ಕೋಶಾಧಿಕಾರಿ (ಪ್ರಭಾರ)
ಶ್ರೀ ವೈ. ಭುವನೇಂದ್ರ ರಾವ್ – ಅಧ್ಯಕ್ಷರು

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# ಸಂಪಾದಕೀಯ.....

- ಡಾ| ವೈ. ಸುದರ್ಶನ್ ರಾವ್

ಕಳೆದ ತಿಂಗಳ ಸಂಪಾದಕೀಯದಲ್ಲಿ ಎಂಟನೆಯ ಶತಮಾನದಲ್ಲಿ ಅವತರಿಸಿದ ಜಗದ್ಗುರುಗಳಾದ ಶ್ರೀ ಆದಿಶಂಕರಾಚಾರ್ಯರು ಈ ಭರತಖಂಡದ ವೈದಿಕ ಸಮಾಜವನ್ನು ಪಂಚಾಯತನ ಪೂಜಾ ಪದ್ಧತಿಯ ಮೂಲಕ ಹೇಗೆ ಒಂದುಗೂಡಿಸಿದರೆಂದು ವಿವರಿಸಿದ್ದೆ. ಹನ್ನೊಂದನೆಯ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನೂ ಹಾಗೂ ಹದಿಮೂರನೆ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನೂ ಪ್ರತಿಪಾದಿಸಿದರು. ಅವರು ವೈಷ್ಣವ ಹಾಗೂ ಮಾಧ್ವ ಮತಗಳನ್ನು ಸ್ಥಾಪಿಸಿದರು. ಈ ಬೆಳವಣಿಗೆಯ ನಂತರ ವೈದಿಕರಲ್ಲಿ ಹೆಚ್ಚಿನ ಶೈವರು ಅದ್ವೈತಾನುಯಾಯಿಗಳಾಗಿಯೂ ವಿಶಿಷ್ಟಾದ್ವೈತಿಗಳು ಹಾಗೂ ಮಾಧ್ವರು ವೈಷ್ಣವರಾಗಿಯೂ ಹಂಚಿಹೋದರು. ಕಾಲಕ್ರಮೇಣ ವೈದಿಕರೊಳಗೆ ಆಚಾರವಿಚಾರಗಳಲ್ಲಿ, ಸಿದ್ಧಾಂತದಲ್ಲಿ, ಪೂಜಿಸುವ ದೇವರ ಶ್ರೇಷ್ಠತನದಲ್ಲಿ ಭಿನ್ನಾಭಿಪ್ರಾಯ ಪುನಃ ತಲೆದೋರಿತು. ಭಿನ್ನಾಭಿಪ್ರಾಯಕ್ಕಿಂತಲೂ ತಾನೇ ಶ್ರೇಷ್ಠ ಎಂಬ ಅಹಂ ಹಾಗೂ ತಾನು ಪೂಜಿಸುವ ದೇವರೇ ನಂಬರ್ ಒನ್ ಎಂಬ ಬಾಲಿಷ ತರ್ಕಗಳು ವೈದಿಕರ ಒಗ್ಗಟ್ಟನ್ನು ನಾಶಮಾಡಿದವು. ಅದಕ್ಕೆ ಸರಿಯಾಗಿ ನಮ್ಮ ದೇಶದ ರಾಜಕೀಯ ಏಳುಬೀಳುಗಳು, ಇಸ್ಲಾಂ ಹಾಗೂ ಕ್ರೈಸ್ತ ಧರ್ಮದ ಪ್ರಾಬಲ್ಯ, ವೈದಿಕ ವಿರೋಧಿ ಗುಂಪುಗಳು ಬ್ರಾಹ್ಮಣರಿಗೆ ಇನ್ನಷ್ಟು ಕಷ್ಟವನ್ನು ತಂದಿಕ್ಕಿವೆ. ಬ್ರಾಹ್ಮಣರು ಅಂದರೆ ಆರ್ಯರು, ಅವರು ಹೊರಗಿನಿಂದ ಬಂದವರು, ಸನಾತನ ಧರ್ಮ ಕೇವಲ ಬ್ರಾಹ್ಮಣರದ್ದು ಮಾತ್ರ, ಇತರರು ಈ ದೇಶದ ಮೂಲನಿವಾಸಿಗಳು, ಅವರು ಹಿಂದೂ ಧರ್ಮೀಯರಲ್ಲ ಎಂಬ ವಿತಂಡವಾದವೂ ಇದೆ. ಇದು ಬ್ರಾಹ್ಮಣರ ಬಲವನ್ನು ಇನ್ನಷ್ಟು ಕುಗ್ಗಿಸುವ ಪ್ರಯತ್ನವಾಗಿದೆ. ಪ್ರಜಾಪ್ರಭುತ್ವ ದೇಶವಾಗಿ ಬದಲಾಗಿರುವ ನಮ್ಮ ದೇಶದಲ್ಲಿ ಸಂಖ್ಯಾ ಬಲಕ್ಕೆ ಪ್ರಾಧಾನ್ಯತೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಮೂರರಿಂದ ಐದರಷ್ಟಿರುವ ಬ್ರಾಹ್ಮಣರನ್ನು ಎಲ್ಲಾ ಸರಕಾರಿ ಸ್ವಾಮ್ಯತೆಯ ಕ್ಷೇತ್ರಗಳಲ್ಲಿ ನಿರ್ಲಕ್ಷಿಸಲಾಗುತ್ತಿರುವುದಕ್ಕೆ ಇದೇ ಕಾರಣ. ಬ್ರಾಹ್ಮಣರು ಇಂದು ಈ ದೇಶದಲ್ಲಿ ಇನ್ನೂ ಸಾಮಾಜಿಕವಾಗಿ ಉನ್ನತ ಸ್ಥಾನಗಳಲ್ಲಿದ್ದರೆ ಅದಕ್ಕೆ ಅವರಿಗೆ ಕಷ್ಟದ ದುಡಿಮೆ, ಪ್ರಾಮಾಣಿಕತೆ, ಬುದ್ಧಿವಂತಿಕೆ, ಆಚಾರವಿಚಾರಗಳು ಜನ್ಮದತ್ತವಾಗಿ ಸಿದ್ಧಿಸಿರುವುದೇ ಕಾರಣವಾಗಿದೆಯೇ ಹೊರತು ಯಾವುದೇ ಬಾಹ್ಯ ಸಹಾಯಗಳಿಂದಲ್ಲ. ಬ್ರಾಹ್ಮಣರೊಂದಿಗೆ ತಾರತಮ್ಯದಿಂದ ವರ್ತಿಸುವುದರ ವಿರುದ್ಧ ಹಾಗೂ ಪರಸ್ಪರರ ಏಳಿಗೆಗೋಸ್ಕರ ಬ್ರಾಹ್ಮಣರೆಲ್ಲರು ಸಂಘಟಿತರಾಗುವುದು 21ನೆಯ ಶತಮಾನದ ಅಗತ್ಯವಾಗಿದೆ. ಅದರೊಂದಿಗೆ ಬ್ರಾಹ್ಮಣರಿಗೆ ಈ ದೇಶದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರಬೇಕಾದ ಅಘೋಷಿತ ಜವಾಬ್ದಾರಿಯೂ ಇದೆ. ಈ ನಿಟ್ಟಿನಲ್ಲಿ ಬ್ರಾಹ್ಮಣ ಸಮಾಜದ ಮುಂದಾಳುಗಳು ಹಾಗೂ ಚಿಂತಕರ ಹಿರಿತನದಲ್ಲಿ ಸಮಗ್ರ ವಿಪ್ರಬಾಂಧವರು ಸೈದ್ಧಾಂತಿಕ ಭಿನಾಭಿಪ್ರಾಯಗಳನ್ನು ಬದಿಗಿಟ್ಟು ಬ್ರಾಹ್ಮಣ ಸಂಸ್ಕೃತಿಯ ಛತ್ರದಡಿಯಲ್ಲಿ ಒಂದಾಗುವ ಪ್ರಯತ್ನ ನಡೆಯುತ್ತಿರುವುದು ಸಂತೋಷದ ವಿಷಯ. ಸ್ಥಾನಿಕ ಬ್ರಾಹ್ಮಣ ಬಾಂಧವರು ಈ ಒಗ್ಗಟ್ಟಿಗೆ ಅಗತ್ಯವಾಗಿ ಕೈಜೋಡಿಸಲೇ ಬೇಕು.

**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಶ್ರೀ ಗಣೇಶ ಚತುರ್ಥಿ ಹಾಗೂ ಶ್ರೀ ಕೃಷ್ಣಜನ್ಮಾಷ್ಟಮಿಯ ಶುಭಾಶಯಗಳು**


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-24**

## ಶ್ರೀ ಚೆನ್ನಕೇಶವ ಸ್ವಾಮಿ ದೇವಸ್ಥಾನ, ಸುಳ್ಯ





ಸುಮಾರು 600 ವರ್ಷಗಳ ಹಿಂದೆ ಸುಳ್ಯವನ್ನು ಆಳುತ್ತಿದ್ದ ಕೊಡಗಿನ ಅರಸರ ಸಾಮಂತರಾದ ಬಲ್ಲಾಳರಾಯರು (ಚೆನ್ನಿಗರಾಯ ಬಲ್ಲಾಳ) ಬೇಟೆಯಾಡಲು ಕಾಡಿನಲ್ಲಿ ಸುತ್ತುತ್ತಿದ್ದಾಗ ಪ್ರಶಾಂತವಾದ ಪ್ರದೇಶವೊಂದರಲ್ಲಿ ಅವಧೂತ ಸ್ವಾಮಿಗಳೊಬ್ಬರು ಪೂಜಿಸುತ್ತಿದ್ದ ಚೆನ್ನಕೇಶವ ಸ್ವಾಮಿಯ ಮೂರ್ತಿಯನ್ನು ಕಂಡು ಈ ವಿಗ್ರಹ ತನಗೆ ಬೇಕೆಂದು ಬಯಸಿ ಅವರಲ್ಲಿ ಬೇಡಿ ತನ್ನೊಡನೆ ತಂದು ತನ್ನ ನಿವಾಸ(ಬೀಡು)ನಲ್ಲಿ ಇರಿಸಿದನಂತೆ. ಕಾಲಕ್ರಮೇಣ ಮೂರ್ತಿಗೆ ಪ್ರತ್ಯೇಕವಾದ ದೇವಸ್ಥಾನವೊಂದನ್ನು ಕಟ್ಟಬೇಕೆಂದು ಶಕುನಸೂಚನೆಯಾದ ಹಿನ್ನೆಲೆಯಲ್ಲಿ ನದೀತೀರದಲ್ಲಿ ಪಶ್ಚಿಮಾಭಿಮುಖವಾಗಿ ದೇವರನ್ನು ಪ್ರತಿಷ್ಠಾಪಿಸಿ ಈ ದೇವಸ್ಥಾನವನ್ನು ಕಟ್ಟಿಸಿದನಂತೆ. ಅಂದು ಕೊಡಗಿನ ಅರಸನಿಗೂ ಸಾಮಂತ ಬಲ್ಲಾಳನಿಗೂ ಮಂತ್ರಿಗಳಾಗಿದ್ದವರು ನಮ್ಮವರೇ. ಇವರು ಇತಿಹಾಸ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ದಿವಾನ ಲಕ್ಷ್ಮೀನಾರ್ಣಪ್ಪಯ್ಯನವರ ಕುಟುಂಬಸ್ಥರು. ಅಂದಿನಿಂದಲೂ ಈ ಕುಟುಂಬದವರೇ ದೇವಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಪ್ರಸ್ತುತ ಡಾ| ಹರಪ್ರಸಾದ ಇವರು ಅನುವಂಶಿಕ ಮೊಕ್ತೇಸರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದೇವಸ್ಥಾನವು ಮುಜರಾಯಿ ಇಲಾಖೆಯ ಸುಪರ್ಧಿಯಲ್ಲಿದೆ

ಸುಂದರವಾದ ಚತುರ್ಭುಜ ಶ್ರೀ ಚೆನ್ನಕೇಶವನ ಮೂರ್ತಿ ಪ್ರಧಾನ ಗರ್ಭಗುಡಿಯಲ್ಲಿದೆ ಉಪದೇವರಾಗಿ ಶ್ರೀ ದುರ್ಗಾಪರಮೇಶ್ವರಿ ಹಾಗೂ ಕೋಟೆ ಆಂಜನೇಯರನ್ನು ಪ್ರತ್ಯೇಕ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಸ್ಥಾನವನ್ನು ಕಟ್ಟಿಸಿದ ಬಲ್ಲಾಳರಾಯನು ಆಯುಧವನ್ನು ಹಿಡಿದು ಕುದುರೆಯಲ್ಲಿ ಸವಾರಿ ಮಾಡುತ್ತಿರುವ ಮೂರ್ತಿಯೂ ಇಲ್ಲಿದೆ

ಪ್ರತೀ ವರ್ಷ ಜನವರಿ ಹತ್ತರಂದು ಜಾತ್ರೆ ನಡೆಯುತ್ತದೆ. ಈ ಜಾತ್ರೆಗೆ ಬೇರೆ ಬೇರೆ ಕಡೆಯಿಂದ ನಾಲ್ಕು ದೈವಗಳು ಆಗಮಿಸಿ ಬಲ್ಲಾಳನ ಬೀಡಿನಲ್ಲಿ ಮೊಕ್ಕಾಂ ಹೂಡಿ ಭಾಗಿಯಾಗುವುದೊಂದು ವಿಶೇಷ. ನಾಗರ ಪಂಚಮಿ, ಅಷ್ಟಮಿ, ಚೌತಿ, ನವರಾತ್ರಿ, ದೀಪಾವಳಿ, ಯುಗಾದಿ ಹೀಗೆ ಎಲ್ಲಾ ಹಬ್ಬಗಳನ್ನು ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶ್ರಾವಣ ತಿಂಗಳಿನ ಶನಿವಾರದಂದು ವಿಶೇಷ ಪೂಜೆ ಇರುತ್ತದೆ. ಶ್ರಾವಣ ಮಾಸದ ಅಮವಾಸ್ಯೆಯಂದು ನದಿಗೆ ಮಂಗಳವಾದ್ಯ ಸಮೇತ ತೆರಳಿ ನದಿಗೆ ಪೂಜೆ ಅರ್ಪಿಸಿ ಭತ್ತ ಹಾಗೂ ಭಾಗೀನ ಸಮರ್ಪಿಸುವ ಸಂಪ್ರದಾಯವಿದೆ ಹೀಗೆ ಶ್ರಾವಣ ಅಮವಾಸ್ಯೆಯಂದು ಆರಂಭವಾದ ನದಿಗೆ ಭತ್ತ ಸಮರ್ಪಿಸುವ ಸೇವೆಯನ್ನು ಉತ್ಸವಕ್ಕೆ ಕೊಡಿಯೇರುವ ದಿನದ ತನಕ ನಡೆಸಲಾಗುತ್ತದೆ

ಸುಳ್ಯದಿಂದ ಮಡಿಕೇರಿಗೆ ಹೋಗುವ ರಸ್ತೆಯಲ್ಲಿ ಸುಳ್ಯಪೇಟೆಯ ಹೃದಯದಲ್ಲಿ ಬಲಕ್ಕೆ ಈ ದೇವಸ್ಥಾನಕ್ಕೆ ಹೋಗುವ ರಸ್ತೆಯಿದೆ. ಹೆಚ್ಚಿನ ಮಾಹಿತಿಗಾಗಿ ಡಾ| ಹರಪ್ರಸಾದ ಇವರನ್ನು 9341126260 ಇದರಲ್ಲಿ ಸಂಪರ್ಕಿಸಬಹುದು

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging



# ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.21-09-2017ರಿಂದ 29-09-2017ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 7-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.30-09-2017ನೇ ಶನಿವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| ಭಕ್ತಿಗೀತೆ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| ಚಿತ್ರರಚನೆ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenery) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| ರಂಗವಲ್ಲಿ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| ಶಂಖ ಊದುವುದು (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| ಕನಕಾಧಾರ ಸ್ತೋತ್ರ | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |
| ಚೂರ್ಣಿಕೆ | ಎಲ್ಲಾ ವಯೋಮಾನದವರಿಗೆ | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

11-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣೆ ನಡೆಯಲಿರುವುದು.

ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ ''ಶನೀಶ್ವರ ಮಹಾತ್ಮೆ''

ಸಮಯ: ಸಂಜೆ 4-00ರಿಂದ

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕೆ ಕೃಷ್ಣರಾವ್ ದೊಡ್ಡಣಗುಡ್ಡೆ


Buying and selling shares
as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com





ಎಮ್. ದೇವಾನಂದ್ ಭಟ್
Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು








With Best Compliments From :

Ph : 98459 92859

Ganesh Hebbar & Associates
CHARTERED ACCOUNTANT

S.M.S.P. Complex, Udupi - 576 101.

# 'ತುಳುನಾಡಿನಲ್ಲಿ ಬ್ರಾಹ್ಮಣ್ಯ', 'ಆದಿಶಂಕರಾಚಾರ್ಯರು ಪ್ರಥಮ ಮೆನೇಜ್ ಮೆಂಟ್ ಗುರು ಮತ್ತು ವೇದಗಣಿತ'


- ವೈ. ಮೋಹನ ರಾವ್

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಇದರ 50ನೇ ವರ್ಷದ ನೆನಪಿನಲ್ಲಿ ಸ್ಮರಣಸಂಚಿಕೆ 'ಸುವರ್ಣ ಸ್ಮೃತಿ' ಬಿಡುಗಡೆಗೊಂಡ ಸಂದರ್ಭದಲ್ಲಿ ಪ್ರಕಟಣೆಯಾದ 'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕದ ಲೇಖಕರು 'ಸಿ.ಎಸ್.ರಾವ್‌ರವರ ಲೇಖಕರ ಮಾತು' ಹೀಗಿದೆ - ನಾನು ಪ್ರೊಫೆಸರ್ ಗುರುರಾಜ ಭಟ್‌ರವರು ಬರೆದಿರುವ ಹಲವು ಪುಸ್ತಕಗಳನ್ನು ಓದಿದ್ದೇನೆ ಮತ್ತು ಅವರ ಸಾಧನೆಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಇದರೊಂದಿಗೆ ಬ್ರಾಹ್ಮಣ್ಯಕ್ಕೆ ಸಂಬಂಧಿಸಿದ ''ಬೋಂಬೆ ಸಮಾಚಾರ'' ಮತ್ತು ಅಚ್ಚುತಶರ್ಮರವರ ಪುಸ್ತಕಗಳನ್ನೂ ಓದಿದ್ದೇನೆ. ಇವರೆಲ್ಲರ ಪುಸ್ತಕದ ಆಧಾರದಲ್ಲಿ ''ತುಳುನಾಡಿನಲ್ಲಿ ಬ್ರಾಹ್ಮಣ್ಯ'' ಎನ್ನುವ ಪುಸ್ತಕವನ್ನು ಬರೆದಿದ್ದೇನೆ. ಅಗತ್ಯ ಕಂಡಲ್ಲಿ ಅವರ ಮೂಲ ಹೇಳಿಕೆಗಳನ್ನು ಯಥಾಸ್ಥಿತಿಯಲ್ಲಿ ಕೊಟ್ಟಿದ್ದೇನೆ. ಈ ಎಲ್ಲಾ ಲೇಖಕರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಹಿಂದೆ ''ಶ್ರೀ ಶಾರದಾ'' ಪತ್ರಿಕೆಯಲ್ಲಿ ಪ್ರಕಟವಾದ ಸರಣಿ ಲೇಖನಗಳ ಸಂಗ್ರಹವನ್ನು ಇಂದು ಈ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದ್ದೇನೆ.

ಎನ್.ಕೆ.ಜಗನ್ನಿವಾಸ ರಾವ್, ನ್ಯಾಯವಾದಿಗಳು, ರಾಜ್ಯ ಧಾರ್ಮಿಕ ಪರಿಷತ್ತು ಸದಸ್ಯರು ಇವರು ತಮ್ಮ ಮುನ್ನುಡಿಯಲ್ಲಿ ಹೇಳುತ್ತಾರೆ - ''ಶ್ರೀಯುತ ಸಿ.ಎಸ್.ರಾವ್ ನಿವೃತ್ತ ಜಿ.ಎಂ., ಕಾರ್ಪೋರೇಷನ್ ಬ್ಯಾಂಕ್ ತಮ್ಮ ವಿಶ್ರಾಂತ ಜೀವನದಲ್ಲಿ ಸಮಯವನ್ನು ಹಾಳು ಮಾಡದೇ ತುಂಬಾ ಆಳವಾಗಿ ಬ್ರಾಹ್ಮಣರು ತುಳುನಾಡಿನಲ್ಲಿ ಬ್ರಾಹ್ಮಣ್ಯ ಎಂಬ ಬಗ್ಗೆ ಅಧ್ಯಯನ ನಡೆಸಿ ಹೊತ್ತಿಗೆಯನ್ನು ಹೊರ ತಂದಿದ್ದು ಇದು ಹೊಸ ಹೊಸ ವಿಚಾರಗಳ, ಆಚಾರಗಳ ಹಾಗೂ ದಕ್ಷಿಣ ಕನ್ನಡಿಗ ಇತಿಹಾಸ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಸದ್ರಿ ಹೊತ್ತಿಗೆ ಸಾರ್ವಜನಿಕರಿಗೆ ಇತಿಹಾಸ ಪುಟಗಳನ್ನು ಮೆಲುಕು ಹಾಕಲು ಅವಕಾಶವನ್ನು ತಮ್ಮ ಪುಸ್ತಕದ ಮೂಲಕ ಲೇಖಕರು ನೀಡಿರುತ್ತಾರೆ''.

ಸಾಹಿತಿ ಮತ್ತು ವಿಮರ್ಶಕರಾದ ಈಶ್ವರಯ್ಯ ಇವರ 'ನಲ್ನುಡಿ' ಹೀಗಿದೆ- ''ಸನ್ಮಿತ್ರರಾದ ಶ್ರೀ ಸಿ.ಎಸ್.ರಾವ್ ಅವರು ತುಳುನಾಡಿನಲ್ಲಿ ಬ್ರಾಹ್ಮಣ್ಯ ಎನ್ನುವ ವಿಚಾರದಲ್ಲಿ ಈ ಹಿಂದೆ ಪ್ರಕಟವಾದ ಲೇಖನಗಳ ಆಧಾರದಲ್ಲಿ ಪ್ರಸ್ತುತ ಹೊತ್ತಗೆಯನ್ನು ಹೊರತಂದಿರುತ್ತಾರೆ. ಜಿಜ್ಞಾಸುಗಳಿಗೆ ಉಪಯುಕ್ತವೆನಿಸಬಹುದಾದ ಅವರ ಯತ್ನ ಶ್ಲಾಘನಾರ್ಹ.

ಕೃತಿಯಲ್ಲಿ (ಪುಟ 10) ಲೇಖಕರು ಒಂದು ಅಂಶವನ್ನು ತಿಳಿಸುತ್ತಾರೆ- ''ಸ್ಥಾನಿಕವೆಂಬ ಅಧಿಕಾರ ಸ್ಥಾನವು ಕೌಟಿಲ್ಯನ ಕಾಲದಲ್ಲಿ ಆಡಳಿತದಲ್ಲಿ ಸೇರಿದ್ದರೂ ಆನಂತರದ ರಾಜ್ಯಭಾರ ಕ್ರಮಪದ್ಧತಿಗಳಲ್ಲಿ ಆ ಹೆಸರಿನ ಅಧಿಕಾರ ಸ್ಥಾನವು ಇದ್ದಂತೆ ಕಂಡು ಬರುವುದಿಲ್ಲ.ಆದರೆ ದಕ್ಷಿಣ ಹಿಂದೂ ದೇಶದಲ್ಲಿ ಮುಖ್ಯವಾಗಿ ಕನ್ನಡಜಿಲ್ಲೆಗಳು, ಮೈಸೂರು ಪ್ರಾಂತ್ಯ, ತಮಿಳುನಾಡಿನ ಪಶ್ಚಿಮ ಪ್ರದೇಶಗಳಲ್ಲಿ ಕ್ರಿ.ಪೂ 3ನೇ ಶತಮಾನದಲ್ಲಿ ಮೇಲೆ ಹೇಳಿದಂತೆ ಅಧಿಕಾರ ಸ್ಥಾನದಲ್ಲಿ ಬಂದು ನೆಲೆಸಿದ ಆರ್ಯ ಬ್ರಾಹ್ಮಣರು ಸ್ಥಾನಿಕರೆಂದು ಕರೆಯಲ್ಪಟ್ಟು, ತಮ್ಮ ಕೈ ಕೆಳಗೆ ಬಂದ ಧಾರ್ಮಿಕ ಸಂಸ್ಥೆಗಳ ಅಧಿಕಾರವನ್ನು ಹಾಗೆಯೇ ಉಳಿಸಿಕೊಂಡು,




**ಕೃತಿಗಳು : 'ತುಳುನಾಡಿನಲ್ಲಿ ಬ್ರಾಹ್ಮಣ್ಯ', 'ಆದಿಶಂಕರಾಚಾರ್ಯರು ಪ್ರಥಮ ಮೆನೇಜ್ ಮೆಂಟ್ ಗುರು ಮತ್ತು ವೇದಗಣಿತ' ಲೇಖಕರು : ಸಿ.ಎಸ್.ರಾವ್, ಚಿಟ್ಪಾಡಿ ಪ್ರಕಾಶಕರು : ಸಿ.ಸುನಂದ ರಾವ್ ಚಿಟ್ಪಾಡಿ, ಉಡುಪಿ ಬೆಲೆ : ರೂ.100/- (ತುಳುನಾಡಿನಲ್ಲಿ ಬ್ರಾಹ್ಮಣ್ಯ) ಬೆಲೆ : ರೂ.35/- (ಆದಿಶಂಕರಾಚಾರ್ಯರು ಪ್ರಥಮ ಮೆನೇಜ್‌ಮೆಂಟ್ ಗುರು ಮತ್ತು ವೇದಗಣಿತ)**

ಜನಸಂಖ್ಯೆ ಹೆಚ್ಚಾದಂತೆ ಅಂಥ ಧಾರ್ಮಿಕ ಸಂಸ್ಥೆಗಳು ಹೆಚ್ಚುತ್ತಿದ್ದುದರಿಂದ ಮುಖ್ಯವಾಗಿ ದೇವಾಲಯಗಳ ಅಧಿಕಾರಿಗಳಾಗಿ ಕ್ರಿ.ಶ. 1700ರವರೆಗೆ ಮೆರೆದರು ಎಂಬುದು ಶಿಲಾಶಾಸನಗಳಿಂದ ವಿಷದವಾಗುತ್ತದೆ.''

''ಆದಿಶಂಕರಾಚಾರ್ಯರು ಪ್ರಥಮ ಮೆನೇಜ್ ಮೆಂಟ್ ಗುರು ಮತ್ತು ವೇದಗಣಿತ'' ಪುಸ್ತಕದ ಮುನ್ನುಡಿಯಲ್ಲಿ ಎಲ್ಲೂರು ಭುವನೇಂದ್ರ ರಾವ್ ಇವರು ಹೇಳುತ್ತಾರೆ-''ಶ್ರೀ ಶಂಕರಾಚಾರ್ಯರು ಅಖಂಡ ಭಾರತವನ್ನು ಹಲವಾರು ಬಾರಿ ಸಂಚರಿಸಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ವೇದಸಾರವನ್ನು ಬೋಧಿಸಿದರು ಮಾತ್ರವಲ್ಲ ಅದು ನಿರಂತವಾಗಿ ಮುಂದುವರಿಯಬೇಕೆಂಬ ಧ್ಯೇಯದಿಂದ ಭಾರತದ ನಾಲ್ಕೂ ದಿಕ್ಕುಗಳಲ್ಲಿ 4 ಆಮ್ನಾಯ ಪೀಠಗಳನ್ನು ಸ್ಥಾಪಿಸಿ ಹೇಗೆ ತಮ್ಮ ಮೆನೇಜ್‌ಮೆಂಟ್ ಕೌಶಲವನ್ನು ತೋರಿಸಿದರು ಎಂಬುದನ್ನು ಶ್ರೀ.ಸಿ.ಎಸ್.ರಾಯರು ಈ ಹೊತ್ತಗೆಯಲ್ಲಿ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ.

ವೇದಗಣಿತದ ಪರಿಚಯ ಲೇಖನದಲ್ಲಿ ಹೀಗೆ ತಿಳಿಸಲ್ಪಟ್ಟಿದೆ - ''ಶಕುಂತಳಾ ದೇವಿಯವರು ಗಣಿತದ ಮ್ಯಾಜಿಕನ್ನು ಮಾಡುತ್ತಿದ್ದರು. ಕ್ಷಣ ಮಾತ್ರದಲ್ಲಿ ಎಷ್ಟು ಕ್ಲಿಷ್ಟವಾದ ಗಣಿತದ ಸಮಸ್ಯೆಗೂ ಮನಸ್ಸಿನಲ್ಲಿಯೇ ಲೆಕ್ಕ ಹಾಕಿ ಉತ್ತರ ಕಂಡುಹಿಡಿಯುತ್ತಿದ್ದರು. ಅವರ ನೆನಪಿನ ಶಕ್ತಿಯಿಂದ ಗಣಕಯಂತ್ರಕ್ಕಿಂತಲೂ ವೇಗವಾಗಿ ಗಣಿತವನ್ನು ಮಾಡುತ್ತಿದ್ದರು ಎನ್ನುವುದನ್ನು ಕೇಳಿದ್ದೆವು. ಇದು ಅವರಿಗೆ ಸಾಧ್ಯವಾದದ್ದು ಪ್ರಾಚೀನ ವೇದಗಣಿತದ ಸತತ ಅಭ್ಯಾಸದಿಂದ. ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀಕೃಷ್ಣ ತೀರ್ಥ ಸ್ವಾಮಿಜಿಯವರು ಈ ವೇದಗಣಿತವನ್ನು ಪ್ರಥಮವಾಗಿ ಬೆಳಕಿಗೆ ತಂದರು.

ಈ ಎರಡೂ ಪುಸ್ತಕಗಳು ಉಡುಪಿಯ ಶ್ರೀಶಾರದಾ ಮಂಟಪ ಮತ್ತು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ದೊರಕುತ್ತವೆ.

# ಶತಮಾನದ ಪ್ರಭಾವಿ ಕನ್ನಡಿಗ ಐ.ರಾಮಮೋಹನ ರಾವ್

- ಡಾ.ವೈ.ಅವನೀಂದ್ರನಾಥ್ ರಾವ್



ಪ್ರಧಾನ ಮಂತ್ರಿಯವರ ಕಾರ್ಯಾಲಯ ಭಾರತದ ಶಕ್ತಿ. ರಾಜಕಾರಣದ ಕೇಂದ್ರ ಸ್ಥಾನ. ಈ ಕಾರ್ಯಾಲಯದಲ್ಲಿ ಸುದೀರ್ಘ ಕಾಲ ಸಂಪರ್ಕ ಮತ್ತು ಪ್ರಭಾವ ಹೊಂದಿದ್ದ ಕನ್ನಡಿಗ ಇನ್ನ ರಾಮಮೋಹನ ರಾವ್.

ಸರಕಾರದ ಪ್ರಧಾನ ವಾರ್ತಾಧಿಕಾರಿ, ನಾಲ್ವರು ಪ್ರಧಾನಿಗಳಾದ ರಾಜೀವ್ ಗಾಂಧಿ, ಚಂದ್ರಶೇಖರ್, ವಿ.ಪಿ.ಸಿಂಗ್ ಮತ್ತು ಪಿ.ವಿ ನರಸಿಂಹ ರಾವ್ ಅವರಿಗೆ ಮಾಧ್ಯಮ ಸಲಹೆಗಾರ, ಪ್ರಧಾನಿ ಐ.ಕೆ. ಗುಜ್ರಾಲ್ ಅವರ ಅಪೇಕ್ಷೆ ಮೇರೆಗೆ ದ್ವೀಪ ರಾಷ್ಟ್ರಕ್ಕೆ ಸಾಂಸ್ಕೃತಿಕ ರಾಯಭಾರಿಯಾಗಿ ತೆರಳಿ ಟ್ರೆನಿಡಾಡ್‌ನಲ್ಲಿ ಗಾಂಧಿ ಸ್ಮಾರಕ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ, ಪ್ರಧಾನಿ ವಾಜಪೇಯಿ ಸರಕಾರದಲ್ಲಿ ರಕ್ಷಣಾ ಸಚಿವರ ಸಲಹೆಗಾರ, ರಾಷ್ಟ್ರಪತಿ ಆಳ್ವಿಕೆಯಂತಹ ವಿಶೇಷ ಸಂದರ್ಭಗಳಲ್ಲಿ ಜಮ್ಮು-ಕಾಶ್ಮೀರ, ಪಂಜಾಬ್ ಮತ್ತು ಹರ್ಯಾಣ ಸರಕಾರಗಳಿಗೆ ಸಲಹೆಗಾರ, ಹೀಗೆ ರಾಮಮೋಹನ ರಾವ್ ಅವರ ಸಾಧನೆಯ ಪಟ್ಟಿಬೆಳೆಯುತ್ತದೆ. ಇವೆಲ್ಲವೂ ಐ.ರಾಮಮೋಹನ ರಾವ್ ಅವರು ಒಂದು ಶತಮಾನದ ಅವಧಿಯಲ್ಲಿ ಕಂಡ ಪ್ರಭಾವಿ ಕನ್ನಡಿಗ ಎಂಬುದನ್ನು ರುಜುವಾತುಗೊಳಿಸಿದೆ.

ಇನ್ನ ರಾಮಮೋಹನ ರಾವ್ ಅವರು ನನಗೆ ಸಂಬಂಧಿಕರು. ಉಡುಪಿ ಜಿಲ್ಲೆಯ ಇನ್ನ ಗ್ರಾಮಕ್ಕೆ ಸಮೀಪದ ಎಲ್ಲೂರು ನನ್ನ ಹಿರಿಯರ ಊರು. ಇನ್ನದ ಕೇದಿಗೆ, ಕಲ್ಲಟ ಮತ್ತು ಸಲ್ಡಾನ ಕುಟುಂಬಗಳ ಸದಸ್ಯರು ಪ್ರತಿಭಾಶಿಖರಗಳು. ಮಹಾರಾಷ್ಟ್ರ ಸರಕಾರದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಡಾ.ಪಿ.ಲಲಿತಾ ರಾವ್, ಕ್ರಿಕೆಟ್‌ನ ರವಿಶಾಸ್ತ್ರಿ ಮೊದಲಾದವರು ಈ ಮನೆತನಕ್ಕೆ ಸೇರಿದವರು.

ದೆಹಲಿಯಲ್ಲಿ ರಾಮ ಮೋಹನ ರಾವ್ ಅವರನ್ನು ನಾನು ಮೊದಲ ಬಾರಿ ಭೇಟಿಯಾದಾಗ ಅವರಿಗೆ ಸುಮಾರು ಎಪ್ಪತ್ತು ವರುಷ. ಅವರು ಆಗ ರಕ್ಷಣಾ ಸಚಿವರ ಸಲಹೆಗಾರ. ಅದುವರೆಗೂ ಅವರು ತಮ್ಮ ಕುರಿತಾಗಲಿ ಅಥವಾ ಇತರರು ಅವರ ಕುರಿತಾಗಲೀ ಪುಸ್ತಕ ಬರೆದಿರಲಿಲ್ಲ. ಇದನ್ನು ತೀವ್ರವಾಗಿ ಹಚ್ಚಿಕೊಂಡ ನಾನು ಅವರಲ್ಲಿದ್ದ ಲೇಖನಗಳನ್ನು ಮತ್ತು ಅಪರೂಪದ ಭಾವಚಿತ್ರಗಳನ್ನು ಸಂಗ್ರಹಿಸಿದೆ. ನನ್ನ ಆಶಯಕ್ಕೆ ಸ್ಪಂದಿಸಿದ ಗೆಳೆಯ ಮತ್ತು ಪ್ರಕಾಶಕ ವಸಂತ ಶೆಟ್ಟಿ ಬೆಳ್ಳಾರೆ ಅವರು 'ಅದಮ್ಯ' ಕೃತಿಯನ್ನು ಪ್ರಕಟಿಸಿದರು. ಈ ಯಶೋಗಾಥೆಗೆ ಪತ್ರಕರ್ತ ಜಯರಾಮ ಮಲಾರ್ ಸಂಪಾದಕರು. ನಂತರ ನಾನು ಹೊಸ ಲೇಖನಗಳನ್ನು ಸೇರಿಸಿ 'ನಾನು ಕಂಡ ನನ್ನ ದೇಶ' ಕೃತಿಯನ್ನು ಹೊರತಂದೆ. ಗೆಳೆಯ ಬಾಲಕೃಷ್ಣ ನಾಯ್ಕ್ ಇಲ್ಲಿನ ಕೆಲವು ಲೇಖನಗಳನ್ನು ಅನುವಾದಿಸಿದ್ದರು. ಈ ಕೃತಿಯ ಬಿಡುಗಡೆ ಸಮಾರಂಭ ಬೆಂಗಳೂರಿನಲ್ಲಿ ನಡೆದಾಗ ಹಿರಿಯ ಸಾಹಿತಿಗಳಾದ ಜಿ.ವೆಂಕಟಸುಬ್ಬಯ್ಯ, ಎಲ್.ಎಸ್. ಶೇಷಗಿರಿ ರಾವ್, ಮಾಜಿ ರಾಜ್ಯಪಾಲ ಡಾ.ರಾಮಾ ಜೋಯಿಸ್ ಭಾಗವಹಿಸಿದ್ದರು. ಸ್ಮರಣೀಯ. ಈ ಸಂದರ್ಭಗಳಲ್ಲಿ ರಾಮಮೋಹನ ರಾವ್ ನನಗೆ ಇನ್ನಷ್ಟು ಹತ್ತಿರವಾದರು

ರಾಮಮೋಹನ ರಾವ್ ಅವರ ಮಹತ್ವದ ಕೃತಿ 'ಕಾಂಪ್ಲಕ್ಸ್ ಕಮ್ಯುನಿಕೇಶನ್'ನ ಬಿಡುಗಡೆ ಸಮಾರಂಭ ಮತ್ತು ಅವರಿಗೆ ಎಂ.ವಿ. ಕಾಮತ್ ಸ್ಮಾರಕ ಪ್ರಶಸ್ತಿ ಬಂದ ಘಳಿಗೆಯಲ್ಲಿ ಭಾಗಿಯಾಗಿ ನಾನು ಸಂಭ್ರಮಿಸಿದ್ದೇನೆ. ಇಲ್ಲಿ ನಡೆದ ಸಂವಾದದಲ್ಲಿ ಹಿರಿಯ ಪತ್ರಕರ್ತರು ಕೆಲವು ಸಂಗತಿಗಳನ್ನು ಬಹಿರಂಗಪಡಿಸಿದ್ದರು. ಪ್ರಾದೇಶಿಕ ಅಭಿವೃದ್ಧಿಗಾಗಿ ನರಸಿಂಹರಾವ್ ಸರಕಾರ 'ಎಂ.ಪಿ ಲ್ಯಾಡ್ ಯೋಜನೆ' ಜಾರಿಗೆ ತರುವಲ್ಲಿ ಮತ್ತು ವಾಜಪೇಯಿ ಸರಕಾರದ ಕಾಲದಲ್ಲಿ ದೇಶದ ಹಲವಡೆ ತೆರೆಯಲಾದ ಸೈನಿಕ ಶಾಲೆಗಳ ಆರಂಭಕ್ಕೆ ರಾಮಮೋಹನ ರಾವ್ ಅವರ ಸಲಹೆ ಹೇಗೆ ಕಾರ್ಯರೂಪಕ್ಕೆ ಬಂದಿತ್ತು ಎಂದವರು ವಿವರಿಸಿದ್ದರು. ಇದು ರಾವ್ ಅವರ ದೂರದರ್ಶಿತ್ವಕ್ಕೆ ಒಂದೆರಡು ಉದಾಹರಣೆ. ನಮಗೆ ಇಂತಹ ಹಲವು ನಿರ್ದೇಶನಗಳು ಸಿಗಬಹುದು.

ದೇಶದ ಮಾಧ್ಯಮ ರಂಗದ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡಿದ ರಾಮಮೋಹನ ರಾವ್ ಅವರಿಗೆ ಕರ್ನಾಟಕದ ರಾಜಕಾರಣಿಗಳ ಜೊತೆಗೂ ನಂಟಿತ್ತು. ರಾಮಕೃಷ್ಣ ಹೆಗೆಡೆ, ವೀರಪ್ಪ ಮೊಯಿಲಿ ಮತ್ತು ಆಸ್ಕರ್ ಫೆರ್ನಾಂಡಿಸ್ ಅವರು ಆಪ್ತರಾಗಿದ್ದರು. ಮೊಯಿಲಿಯವರು ತಮ್ಮ ವಕೀಲ ವೃತ್ತಿಯ ಆರಂಭವನ್ನು ನ್ಯಾಯವಾದಿಯಾಗಿದ್ದ ರಾಮಮೋಹನ ರಾಯರ ತಂದೆ ಇನ್ನ ಸುಬ್ಬರಾವ್ ಜೊತೆ ನಡೆಸಿದ್ದರು ಎಂದು ಒಮ್ಮೆ ತಿಳಿಸಿದ್ದರು. ಮುಂದೆ ಮೊಯಿಲಿಯವರು ದೇಶದ ಕಾನೂನು ಮಂತ್ರಿಯಾಗಿದ್ದು ಈಗ ಇತಿಹಾಸ. 'ಮೊದಲ ಬಾರಿಗೆ ನಾನು 1980ರಲ್ಲಿ ಲೋಕಸಭಾ ಸದಸ್ಯನಾಗಿ ದೆಹಲಿಗೆ ಬಂದಾಗ ನನಗೆ ಆತ್ಮೀಯರಾದ ರಾಜಧಾನಿಯ ಮೊದಲ ಕನ್ನಡಿಗ ರಾಮಮೋಹನ ರಾಯರು' ಎಂದು 'ಅದಮ್ಯ' ಕೃತಿಗೆ ಬರೆದ ಮುನ್ನುಡಿಯಲ್ಲಿ ಆಸ್ಕರ್ ಸ್ಮರಿಸಿದ್ದಾರೆ.

ಭಾರತೀಯ ಸೈನ್ಯದ ವಕ್ತಾರನಾಗಿ, ಭಾರತ-ಪಾಕಿಸ್ತಾನ ಯುದ್ಧಗಳ ಸೈನ್ಯದ ಬಾತ್ಮೀದಾರನಾಗಿ, ವಿಶ್ವಸಂಸ್ಥೆಯ ತುರ್ತುಪಡೆಯ ಸಂಪರ್ಕಾಧಿಕಾರಿಯಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಜವಾಬ್ದಾರಿಗಳನ್ನು ರಾಮಮೋಹನ ರಾವ್ ನಿಭಾಯಿಸಿದ್ದರು. ಹೀಗೆ ಇದ್ದ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಮತ್ತು ಅದರ ನೂತನ ಕಟ್ಟಡ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ಬ್ಯಾಂಕಿನ ನಿರ್ದೇಶಕರಾಗಿ, ತುಳು ಕೂಟಗಳ ಮುಖಂಡರಾಗಿ ಇರಲು ಸಮಯ ಇರುತ್ತಿತ್ತು. ಇದು ಅವರ ನಾಡು-ನುಡಿಯ ಬಗೆಗಿನ ಪ್ರಾಮಾಣಿಕ ಪ್ರೀತಿಯನ್ನು ವ್ಯಕ್ತಪಡಿಸಿದೆ.

ಎಂಭತ್ತರ ವಯಸ್ಸಿನಲ್ಲೂ ರಾಮಮೋಹನ ರಾವ್ ಏಷ್ಯಾದ ಅತಿ ದೊಡ್ಡ ಸುದ್ದಿ ಸಂಸ್ಥೆ ಎ.ಎನ್.ಐ ಇದರ ಸಂಪಾದಕರಾಗಿ ದುಡಿಯುತ್ತಿದ್ದರು. ಆದರೆ ಪ್ರಶಸ್ತಿ, ಪುರಸ್ಕಾರ, ಪ್ರಚಾರಗಳಿಂದ ದೂರ ಉಳಿದಿದ್ದರು. ನಾನು ಅವರ ಕುರಿತು ಪುಸ್ತಕ ತರುವ ಪ್ರಸ್ತಾಪ ಮಾಡಿದಾಗ ಆರಂಭದಲ್ಲಿ ಅವರು ಆಸಕ್ತಿ ತೋರಿಸಲಿಲ್ಲ. ಈ ನಿರ್ಲಿಪ್ತ ಭಾವದಿಂದಲೇ ಪ್ರಶಸ್ತಿಗಳು ಅವರನ್ನು ಅರಸಿ ಬರಲಿಲ್ಲ. ಈಚೆಗೆ ಅವರು ಅಗಲಿದಾಗ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿ, ಸಚಿವ ವೆಂಕಯ್ಯ ನಾಯ್ಡು, ರಾಹುಲ್ ಗಾಂಧಿ ಸೇರಿದಂತೆ ಗಣ್ಯರು ರಾಮಮೋಹನ ರಾವ್ ಅವರ ಕಾರ್ಯಕ್ಷಮತೆಯನ್ನು ಶ್ಲಾಘಿಸಿ ಸಂತಾಪ ವ್ಯಕ್ತಪಡಿಸಿದ್ದಾರೆ ಇದು ಇನ್ನ ರಾಮಮೋಹನ ರಾವ್ ಅವರು ಎಲ್ಲ ಬಗೆಯ ಪ್ರಶಸ್ತಿಗಳನ್ನು ಮೀರಿ ನಿಂತಿದ್ದರು ಎಂಬುದನ್ನು ಸಾರಿ ಹೇಳಿದೆ. ಭಾರತ ಕಂಡ ಶ್ರೇಷ್ಠ ಸಂವಹನಕಾರ ಇನ್ನು ಕೇವಲ ನೆನಪು.


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

**SAMPATH KUMAR** Mobile : 9741508881 8884873233

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

# ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2017-18

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.10-09-2017ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2017-18**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2017-2018ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.10-09-2017**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2017-18

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.10-09-2017**ರೊಳಗೆ **ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಉದಯಚಂದ್ರ ಪ್ರತಿಭಾ ಪುರಸ್ಕಾರ 2017-18

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2016-17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನೂ ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮತ್ತು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.10-09-2017**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

# ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.**

2016-17 ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 08-10-2017 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 20-09-2017ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರಿ**

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2017-18ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 31-10-2017**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**

**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**

# ಶ್ರೀ ಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.), ಪಡುಬಿದ್ರಿ

## ವಿಜ್ಞಾಪನೆ

ಪಡುಬಿದ್ರಿ ಬಸ್ಸು ನಿಲ್ದಾಣದಿಂದ ಪೂರ್ವಕ್ಕೆ ಸುಂದರ ಪ್ರಕೃತಿ ಮಡಿಲಲ್ಲಿ ಶ್ರೀ ಬಾಲಗಣಪತಿಯು ವಿಶಿಷ್ಟವಾಗಿ ನೆಲೆನಿಂತ ಕ್ಷೇತ್ರವೇ ಉದಯಾದ್ರಿ ತಾಯಿಯ ಮಡಿಲಲ್ಲಿ ಪವಡಿಸಿದ ಶ್ರೀ ಬಾಲಗಣಪತಿ ದೇವರ ಆರಾಧನೆಯು ಅಂದಾಜು 150 ವರ್ಷಗಳಿಂದ ಅನವರತವಾಗಿ ನಡೆದು ಬರುತ್ತಿದೆ. ಭಕ್ತ ಜನರು ತನು ಮನ ಧನ ಸಹಾಯದಿಂದ ವರ್ಷಂಪ್ರತಿ ಎಳ್ಳಮವಾಸ್ಯೆಯ ದಿನದಂದು ಉತ್ಸವಾದಿ ನಡಾವಳಿಗಳನ್ನು ನಡೆಸಿಕೊಂಡು ಬರುತ್ತಿದ್ದ ಕಾರಣ ಎಳ್ಳಮವಾಸ್ಯೆ ಬಾಲಗಣಪತಿ ಎಂದೇ ಜನಜನಿತವಾಗಿದೆ.

ಶ್ರೀ ಕ್ಷೇತ್ರಕ್ಕೆ ಉದಯ ಕಾಲದ ಸೂರ್ಯನ ಕಿರಣಗಳು ಬೀಳುವ ವಿಶಿಷ್ಟ ಭೌಗೋಳಿಕ ಸ್ವರೂಪವಿದೆ. ಈ ದೇವಳದಲ್ಲಿ ಶ್ರೀ ಬಾಲಗಣಪತಿಯು ಸುಂದರ ವಿಗ್ರಹವು ಉತ್ತರಾಭಿಮುಖವಾಗಿ ಚತುರ್ಭುಜ ಫಲಹಸ್ತನಾಗಿ ನಿಂತಿದ್ದು ಅಪರೂಪದ ದೇವಳ ಎನಿಸಿದೆ. ಪಾಶ, ಅಂಕುಶ, ಅಭಯ, ವರದ ಹಸ್ತವಿರುವ ಮಾತೆ ಪ್ರಸನ್ನ ಪಾರ್ವತಿಯ ಸುಂದರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಪ್ರಾಜ್ಞರ ನಿರ್ದೇಶನದಂತೆ ಜೀರ್ಣಗೊಂಡ ಈ ದೇಗುಲವನ್ನು ಆಗಮ ಶಾಸ್ತ್ರೋಕ್ತವಾಗಿ ವಸ್ತುಶಿಲ್ಪಗಳಿಂದ ಅಷ್ಟಕೋನಾಕೃತಿಯ ಶಿಲಾಮಯ ಗರ್ಭಗುಡಿ ಶಿಲಾಮಯ ತೀರ್ಥ ಮಂಟಪ. ಅಂಬಿಲ, ಸುತ್ತುಪೌಳಿ, ಒಳಾಂಗಣಕ್ಕೆ ಶಿಲೆಯ ಹೊದಿಕೆ ಇತ್ಯಾದಿ ನಿರ್ಮಿಸಿ, 2008ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಶ್ರೀ ದೇವಳಕ್ಕೆ ವಸಂತ ಮಂಟಪ. ಆವರಣ ಗೋಡೆಯನ್ನು 2013ರಲ್ಲಿ ಭಕ್ತ ಮಹಾಶಯರಿಂದ ನಿರ್ಮಿಸಿ ಬ್ರಹ್ಮಕಲಶಾಭಿಷೇಕವನ್ನು ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಬಡ ಮತ್ತು ಮಧ್ಯಮ ವರ್ಗ ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ದೇವಳದ ಭಕ್ತರಾದುದರಿಂದ ಈ ವರ್ಗದ ಜನರಿಗೆ ಧಾರ್ಮಿಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ನಡೆಸಿಕೊಂಡು ಬರಲು ಅನುಕೂಲವಾಗುವಂತೆ ಒಂದು Community Centre ಅಗತ್ಯವೆಂದು ಕಂಡು ಬಂದ ಕಾರಣ 2014ರಲ್ಲಿ ಶ್ರೀ ದೇವಳದ ಮುಂಭಾಗದ ವಿಶಾಲವಾದ ಅಂಗಣಕ್ಕೆ ಮೇಲ್ಛಾವಣಿಯನ್ನು ಮಾಡಿ, ತೆರೆದ ಸಭಾಂಗಣಕ್ಕೆ ವೇದಿಕೆಯನ್ನು ನಿರ್ಮಿಸಲಾಗಿದೆ. 2016ರಲ್ಲಿ ಸಾರ್ವಜನಿಕ ಧನ ಸಹಾಯದಿಂದ ಶ್ರೀ ದೇವರ ಹಿಂಭಾಗದಲ್ಲಿ ಸುಮಾರು 200 ಜನರಿಗಾಗುವ ಭೋಜನ ಶಾಲೆಯನ್ನು ನಿರ್ಮಿಸಿದ್ದು ಇದಕ್ಕೆ "ಶ್ರೀ ಭಾರತೀ ಮಂಟಪ ಉದಯಾದ್ರಿ" ಎಂದು ನಾಮಾಂಕಿತದೊಂದಿಗೆ ಲೋಕಾರ್ಪಣೆ ಮಾಡಿರುತ್ತೇವೆ. ಬಾಕಿ ಉಳಿದಿರುವ ಶ್ರಿ ಕ್ಷೇತ್ರದ ಒಳಗಿನ ಸುತ್ತು ಮತ್ತು ಹೊರಗಿನ ಸುತ್ತಿಗೆ ಮೇಲ್ಛಾವಣಿ ಮತ್ತು ಹೊರಗಿನ ಸುತ್ತಿನ ನೆಲಕ್ಕೆ ಗ್ರಾನೈಟ್‌ನನ್ನು ಹಾಕಿಸಿ ಹಾಗೂ ಶೌಚಾಲಯವನ್ನು ನಿರ್ಮಿಸಲು ತೀರ್ಮಾನಿಸಿದ್ದು ಇದಕ್ಕೆ ಸುಮಾರು 25 ಲಕ್ಷ ಖರ್ಚಾಗುವುದೆಂದು ಅಂದಾಜಿಸಲಾಗಿದೆ. ಈ ಮೇಲಿನ ಮಹಾತ್ಕಾರ್ಯಗಳಿಗೆ ಉದಾರ ದೇಣಿಗೆಯನ್ನು ನೀಡಬೇಕಾಗಿ ಊರ ಹಾಗೂ ಪರವೂರ ಭಕ್ತಾಭಿಮಾನಿಗಳ ಪರವಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

**ತಮ್ಮ ಹೃತ್ಪೂರ್ವಕ ದೇಣಿಗೆಯನ್ನು ಕರ್ನಾಟಕ ಬ್ಯಾಂಕ್, ಪಡುಬಿದ್ರಿ ಶಾಖೆಯ ಉಳಿತಾಯ ಖಾತೆ ಸಂಖ್ಯೆ 6102500100134701 (ಐಎಫ್‌ಸಿ ಕೋಡ್: ಕೆಎಆರ್‌ಬಿ0000610) ಜಮೆ ಮಾಡಿ, ಶ್ರೀ ದೇವಳದಿಂದ ರಶೀದಿ ಪಡೆಯಬೇಕಾಗಿ ವಿನಂತಿ.**

# ಡಾ.ವೈ.ರವೀಂದ್ರನಾಥ ರಾಯರಿಗೆ ದೆಹಲಿಯ ಸಿಸ್ಕೋ ಅಂತರಾಷ್ಟ್ರೀಯ ಸಂಸ್ಥೆಯ ಯೋಜನಾಕಾರ್ಯ ಪುರಸ್ಕಾರ



ಬ್ರಹ್ಮಾವರ: ಸ್ಥಳೀಯ ಎಸ್.ಎಂ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲ, ಸಮಾಜ ವಿಜ್ಞಾನ ಸಂಶೋಧಕ ಡಾ.ವೈ.ರವೀಂದ್ರನಾಥ ರಾವ್ ಅವರು ದೆಹಲಿಯ ಸುಲಭ್ ಅಂತರಾಷ್ಟ್ರೀಯ ಸಮಾಜಸೇವಾ ಸಂಸ್ಥೆಯ ಸ್ಥಾಪಕ, ವಿಶ್ವ ಸಮಾಜ ಸುಧಾರಕ, ಪದ್ಮ ಭೂಷಣ ಡಾ. ಬಿಂದೇಶ್ವರ ಪಾಠಕ್ ಅವರ ಕುರಿತು ಕೃತಿಯೊಂದನ್ನು ರಚಿಸುವ ಯೋಜನಾಕಾರ್ಯದ ಪುರಸ್ಕಾರ ಪಡೆದಿದ್ದಾರೆ. ದೆಹಲಿಯಲ್ಲಿ ಇತ್ತೀಚೆಗೆ ನಡೆದ ಗೋಷ್ಠಿಯಲ್ಲಿ ಕೃತಿಯ ಕುರಿತು ಪ್ರಸ್ತಾವನೆ ಮಂಡಿಸಿದ ಡಾ। ರಾವ್ ಅವರನ್ನು ಡಾ. ಪಾಠಕ್ ಅವರು ಅಭಿನಂದಿಸಿ ಶುಭ ಹಾರೈಸಿದರು.

## ಅಭಿನಂದನೆಗಳು



ಕುಂದಾಪುರ ತಾಲೂಕು ಬಿಜೂರು ಗ್ರಾಮದ ಹೊಸ್ಕೋಟೆ ಶ್ರೀ. ಹೆಚ್. ಹಿರಿಯಣ್ಣ ರಾವ್ ರವರ ಮೊಮ್ಮಗ ಶ್ರೀ ಹೆಚ್ ಜಗದೀಶ್ ರಾವ್, ಶ್ರೀಮತಿ ವಾಣಿಯವರ ಪುತ್ರ ಶ್ರೀ ರೋಹನ್ ರಾವ್ ಎಸ್.ಎಸ್.ಎಲ್.ಸಿ 2017ರ ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ (623/625) ಸ್ಥಾನ ಪಡೆದಿದ್ದು, ಉಡುಪಿ ಜಿಲ್ಲೆಗೆ ಪ್ರಥಮ ಸ್ಥಾನ ಹೊಂದಿರುವುದು ಸಂತಸದ ಹಾಗೂ ಹೆಮ್ಮೆಯ ವಿಷಯವಾಗಿದೆ. 6ನೇ ತರಗತಿಯವರೆಗೆ ಉಪ್ಪುಂದದ ಶ್ರೀ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತಿದ್ದು ನಂತರ ಎಸ್.ಎಸ್.ಎಲ್.ಸಿ ವರೆಗೆ ಕಂಬದಕೋಣೆ ಸಂದೀಪನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿತಿದ್ದು ಅತಿ ಹೆಚ್ಚು ಅಂಕ ಗಳಿಸಿರುವುದು ಶಾಲೆಗೆ, ಹೆತ್ತವರಿಗೆ ಹೆಮ್ಮೆಯ ವಿಷಯವಾಗಿರುತ್ತದೆ. ಇವನಿಗೆ ಸಂಗೀತ, ನಾಟಕ, ಕ್ವಿಜ್ ಮತ್ತು ಹಲವು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅನೇಕ ಪ್ರಶಸ್ತಿ ಬಂದಿದ್ದು, ಗುರು ಹಿರಿಯರ ಪ್ರಶಂಸೆಗೆ ಪಾತ್ರರಾಗಿರುವುದು ಸಜ್ಜನಿಕೆಯ ಸಂಕೇತ. 7ನೇ ತರಗತಿಯಲ್ಲಿಯೇ ತಬಲ ಜೂನಿಯರ್ ವಿಭಾಗದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದು, 2017ರ ಹಿಂದೂಸ್ಥಾನಿ ಸಂಗೀತ ಜೂನಿಯರ್ ಪರೀಕ್ಷೆಯನ್ನು ಪೂರೈಸಿರುತ್ತಾನೆ. ಪ್ರಸ್ತುತ ಮಂಗಳೂರು ಶ್ರೀ ಶಾರದಾ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಇವನು ಮುಂದೆ ಉನ್ನತ ವ್ಯಾಸಂಗ ಹೊಂದಿ ಆದರ್ಶ ವ್ಯಕ್ತಿಯಾಗಲಿ ಎಂದು ಶುಭ ಹಾರೈಸುತ್ತೇವೆ.

# ಮೊಬೈಲ್ ಮಾರ್ಚುರಿ ರೆಫ್ರಿಜರೇಟರ್ ಕೊಡುಗೆ



ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾ ಸಭಾ ಹಾಗೂ ಉಡುಪಿಯ ಭಾರತ್ ಡೆವಲಪರ್ಸ್‌ನ ಮಾಲೀಕರಾದ ಶ್ರೀ ಯು ಪ್ರಫುಲ್ಲಚಂದ್ರ ರಾವ್ ಇವರು ಸಾರ್ವಜನಿಕ ಉಪಯೋಗಕ್ಕಾಗಿ ಮೊಬೈಲ್ ಮಾರ್ಚುರಿ ರೆಫ್ರಿಜರೇಟರ್‌ನ್ನು ಉಡುಪಿ ಕಾಡಬೆಟ್ಟಿನ ಸಂಜೀವಿನಿ ಅಂಬ್ಯುಲೆನ್ಸ್ ಸರ್ವಿಸ್‌ನ ಶ್ರೀ ಪ್ರಕಾಶ್‌ರವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಮಂಜುನಾಥ ಉಪಾಧ್ಯ, ಉಪಾಧ್ಯಕ್ಷ ವಾಸುದೇವ ಅಡೂರು, ಪ್ರಧಾನ ಕಾರ್ಯದರ್ಶಿ ಗಣೇಶ್‌ರಾವ್ ಕುಂಭಾಶಿ, ಸಹಕಾರ್ಯದರ್ಶಿ ನಾಗರಾಜ ಉಪಾಧ್ಯ, ವಿಪ್ರಧ್ವನಿ ಪತ್ರಿಕೆಯ ಉಪಸಂಪಾದಕ ಕೃಷ್ಣಕುಮಾರ್ ರಾವ್ ಮಟ್ಟು, ಭಾರತ್ ಡೆವಲಪರ್ಸ್‌ನ ಮಾಲಕರಾದ ಯು ಪ್ರಫುಲ್ಲಚಂದ್ರರಾವ್, ಉಡುಪಿಯ ಸಮಾಜ ಸೇವಕರಾದ ಉದ್ಯಮಿ ವಿಶ್ವನಾಥ ಶೆಣೈ, ಉಡುಪಿ ತೆಂಕುಪೇಟೆ ವಾರ್ಡ್‌ನ ನಗರಸಭಾ ಸದಸ್ಯರಾದ ಶ್ಯಾಮಪ್ರಸಾದ ಕುಡ್ವ, ಉಡುಪಿಯ ಜನರಲ್ ಕ್ರಾಫ್ಟರ್ಸ್‌ನ ಗಣೇಶ್ ರಾವ್, ಸಂಜೀವಿನಿ ಅಂಬ್ಯುಲೆನ್ಸ್‌ನ ಪ್ರಕಾಶ್ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯುತ್ ಚಾಲಿತ ಈ ಮೊಬೈಲ್ ಮಾರ್ಚುರಿ ರೆಫ್ರಿಜರೇಟರ್‌ನ್ನು ಉಡುಪಿಯ ಖ್ಯಾತ ಜನರಲ್ ಕ್ರಾಫ್ಟರ್ ಸಂಸ್ಥೆಯು ಬಹಳ ಅಚ್ಚುಕಟ್ಟಾಗಿ,ಸುಮಾರು ರೂ.80,000 ವೆಚ್ಚದಲ್ಲಿ ಇದನ್ನು ತಯಾರಿಸಲಾಗಿದೆ. ಮೃತ ದೇಹವನ್ನು ಆಸ್ಪತ್ರೆಗಳ ಮಾರ್ಚುರಿಯ ಬದಲು ಅವರವರ ಮನೆಯಲ್ಲಿಯೇ ಕಾಪಿಡುವ ಉದ್ದೇಶದಿಂದ ನೀಡಿದ ಈ ಸೇವೆಯು ಸಂಪೂರ್ಣ ಉಚಿತವಾಗಿದ್ದು, ಇದರ ಸಾಗಾಟ ಮತ್ತು ನಿರ್ವಹಣೆಯನ್ನು ಸಂಜೀವಿನಿ ಅಂಬ್ಯುಲೆನ್ಸ್ ಸರ್ವಿಸ್ ಕನಿಷ್ಠ ಮೊತ್ತವನ್ನು ಪಡೆದುಕೊಂಡು ವ್ಯವಸ್ಥೆಗೊಳಿಸಲು ಒಪ್ಪಿಕೊಂಡಿದ್ದಾರೆ. ಹೆಚ್ಚಿನ ವಿವರಗಳಿಗೆ ಸಂಜೀವಿನಿ ಅಂಬ್ಯುಲೆನ್ಸ್ ಸರ್ವಿಸ್‌ನ ಪ್ರಕಾಶ್‌ರ ದೂರವಾಣಿ ಸಂಖ್ಯೆ 9845224816ಯನ್ನು ಸಂಪರ್ಕಿಸಬಹುದೆಂದು ವಿನಂತಿಸಿಕೊಳ್ಳಲಾಗಿದೆ.

ದೂರವಾಣಿ : 2522408

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

L.No.31017. ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ –576101.

ತಾ. : 24-06-2017

### 2016–2017ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2016-2017ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.10-09-2017ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡವಳಿಕೆಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ನಿರ್ಣಯದಂತೆ

| | |
|---|---|
| **ಪಟ್ಟಾಭಿರಾಮ ಎನ್.ಎಸ್** | **ಕೆ. ವೇಣುಗೋಪಾಲ್ ರಾವ್** |
| ಕಾರ್ಯದರ್ಶಿ | ಅಧ್ಯಕ್ಷರು |

**ಕಾರ್ಯಕ್ರಮ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
2. ತಾ:18-09-2016ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
3. 2016-2017ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2016-2017ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
5. 2016-2017ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2017-2018ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
7. 2016-2017ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
8. 2017-2018ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
9. ಸಂಘದ ಮೂಲ ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿ ಬಗ್ಗೆ.
10. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.

ವಿ.ಸೂ. :
1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶ ಹಣವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
3. ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು ಕಡ್ಡಾಯವಾಗಿ 3 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 3 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

ಸದಸ್ಯರು ಸಭೆಗೆ ಬರುವಾಗ ಈ ನೋಟೀಸನ್ನು / ವರದಿಯನ್ನು ತಪ್ಪದೇ ತರಬೇಕಾಗಿ ವಿನಂತಿ. ಸದಸ್ಯರಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರುತ್ತದೆ.

**ಜೂನ್ 2017ರ ಅಂತ್ಯಕ್ಕೆ ಸಂಘದ ಸ್ಥಿತಿ**

| | | | |
|---|---|---|---|
| ಪ್ರಧಾನ ಕಛೇರಿ | - ಲಾಭ | ರೂ.4,82,525.26 | **ಒಟ್ಟು ಲಾಭ ರೂ.5,63,468.26** |
| ಕುಕ್ಕಿಕಟ್ಟೆ ಶಾಖೆ | - ಲಾಭ | ರೂ.46,417.00 | |
| ಪಡುಬಿದ್ರಿ ಶಾಖೆ | - ಲಾಭ | ರೂ.1,697.00 | |
| ಕೋಟೇಶ್ವರ ಶಾಖೆ | - ಲಾಭ | ರೂ.32,829.00 | |





RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ನಮ್ಮನ್ನಗಲಿದ ಮೌನ ಸಾಧಕ ಚಿಕ್ಕಲ್ಬೆಟ್ಟು ದೇವರಾವ್

**ಲೇಖನ : ಕರ್ವಾಲು ಶಂಕರನಾರಾಯಣ ರಾವ್, ಬೆಂಗಳೂರು.**



ಚಿಕ್ಕಲ್ಬೆಟ್ಟು ದೇವರಾಯರು ಹಳ್ಳಿಯಲ್ಲಿ ಜಮೀನ್ದಾರಿಕೆ ನಡೆಸಿ ಪೇಟ ಸುತ್ತಿ ತಿರುಗಾಡಿದವರಲ್ಲ. ದೊಡ್ಡ ಸಮಾಜ ಸೇವಕ ಎಂಬ ಗರಿಯನ್ನೂ ಮುಡಿಗೇರಿಸಿಕೊಂಡವರಲ್ಲ. ಒಬ್ಬ ಹೆಣ್ಣು ಸುಸಂಸ್ಕೃತೆಯಾದರೆ ಒಂದು ಮನೆ ಬೆಳಗುತ್ತದೆ ಎನ್ನುತ್ತಾರೆ. ಅದೇ ಒಬ್ಬ ಗಂಡನು ಸಭ್ಯನಾಗಿ ಜವಾಬ್ದಾರಿ ಹೊತ್ತು ಬಾಳಿದರೆ ದೊಡ್ಡ ಕುಟುಂಬವೊಂದು ಶ್ರೀಮಂತವಾಗುತ್ತದೆ. ಒಂದು ಸಂಪದ್ಭರಿತ ಕುಟುಂಬದಲ್ಲಿ ಹುಟ್ಟಿದ ಮಗು ಬೆಳೆದು ಬಾಳಲ್ಲಿ ಯಶಸ್ಸು ಪಡೆಯಬಹುದು. ಇದರಲ್ಲಿ ದೊಡ್ಡ ಸಾಧನೆ ಕಾಣುವುದಿಲ್ಲ. ಆದರೆ ಶೂನ್ಯದಲ್ಲಿ ಜನಿಸಿ, ತೃಣಮೂಲದಿಂದ ಮೇಲೆದ್ದು ಬಂದು ವ್ಯಕ್ತಿಯೆನ್ನಿಸಿಕೊಂಡಾಗ ಸಾಧಕನಾಗುತ್ತಾನೆ. ಆತನ ಸಾಧನೆಯ ದಾರಿಯಲ್ಲಿ ಗೌಜಿ–ಗದ್ದಲಗಳಿರುವುದಿಲ್ಲ. ಮೊಗ್ಗರಳಿ ಹೂವಾಗುವಾಗಿನ ಮೌನವಿರುತ್ತದೆ.

ಉಡುಪಿ ಜಿಲ್ಲೆ (ಆಗಿನ ದಕ್ಷಿಣ ಕನ್ನಡ)ಯ ಕಾರ್ಕಳ ತಾಲೂಕಿನ ಕುಗ್ರಾಮದಂತಹ ಸಣ್ಣ ಹಳ್ಳಿ ಚಿಕ್ಕಲ್ಬೆಟ್ಟು. ಅಲ್ಲಿ ದಿ| ಗೋವಿಂದ ರಾವ್ ಸಾವಿತ್ರಿ ದಂಪತಿಗಳ ಮಗನಾಗಿ 01.09.1936ರಲ್ಲಿ ಜನಿಸಿದ ದೇವ(ರಾಯ)ನ ಬೆನ್ನಲ್ಲೇ ಇಬ್ಬರು ಸೋದರಿಯರು ಜನಿಸಿದರು. ವಿಧಿಲೀಲೆ ವಿಚಿತ್ರವಾಗಿತ್ತು. ಬೇಗನೆ ತಾಯಿಯನ್ನು ಕಳೆದುಕೊಂಡ ಮಕ್ಕಳು ಪೆರ್ಡೂರಿನ ಅಜ್ಜಿಮನೆ ಸೇರಿದರು. ತಾಯಿಯ ತಾಯಿ (ಅಜ್ಜಿ) ಗಂಗಮ್ಮನವರ ಆಸರೆಯಲ್ಲಿ ಬೆಳೆಯುತ್ತಾ ಅವರ ಜತೆಗೆ ಹೂ–ತುಳಸಿಕೊಯ್ದು ಮಾಲೆಕಟ್ಟಿ ಪೆರ್ಡೂರು ಅನಂತಪದ್ಮನಾಭ ದೇವರಿಗೆ ಅರ್ಪಿಸುತ್ತಿದ್ದ ಮಾಣಿಗೆ ಓದಿನಲ್ಲಿ ಆಸಕ್ತಿ ಅಷ್ಟಕ್ಕಷ್ಟೆ. ಹಾಗಿದ್ದೂ ಆರನೇ ತರಗತಿ ಪಾಸಾಗಿ ಏಳನೇ ತರಗತಿಗೆ ಕಾಲಿಟ್ಟ. ಏನು ಮಾಡಿದರೂ ಓದಿನತ್ತ ಮನಸ್ಸು ವಾಲಲಿಲ್ಲ. ಅದೇ ಕಾರಣಕ್ಕೆ ಒಂದು ದಿನ ಟೀಚರ್ ಹೊಡೆದರು. ಆ ಪೆಟ್ಟು ದೇವನ ಬದುಕನ್ನೇ ಬದಲಿಸಿತ್ತು. ಆಗಿನ್ನು ವಯಸ್ಸು 11. ವಿದ್ಯಾರ್ಹತೆ 6ನೇ ಕ್ಲಾಸ್. ದೈವಿಚ್ಛೆ ಏನಿತ್ತೋ? ಮನೆಬಿಟ್ಟು ಓಡಿದ ಹುಡುಗ ಸೇರಿದ್ದು ಗದಗದ ಊರಿಗೆ. ಜೀವನೋಪಾಯಕ್ಕಾಗಿ ಹೋಟೇಲಲ್ಲಿ ಕೆಲಸ. ಅಚ್ಚರಿ ಎಂದರೆ ಆ ಹುಡುಗನಿಗಿದ್ದ ಬದ್ಧತೆ. ಸಿಕ್ಕಿದ್ದ ಹಣದಲ್ಲಿ ಪ್ರತಿ ತಿಂಗಳು ಅಜ್ಜಿಗೆ ಒಂದು ಸಣ್ಣ ಮೊತ್ತವನ್ನು ಮನಿಆರ್ಡರ್ ಮಾಡುತ್ತಿದ್ದನಂತೆ! ತಾನೂ ಬದುಕಿನಲ್ಲಿ ಏನಾದರೂ ಮಾಡಬೇಕು ಎಂಬ ಹಂಬಲದೊಂದಿಗೆ ದುಡಿಯುತ್ತಾ 1961ರಲ್ಲಿ ಗದಗದಲ್ಲಿ ಸಣ್ಣ ಹೋಟೇಲನ್ನು ಅರಂಭಿಸಿದರು.

ಅದನ್ನು ನಡೆಸುತ್ತ ಅನುಭವಗಳಿಸಿ 1965ರಲ್ಲಿ ಬಳ್ಳಾರಿಗೆ ಹೋಗಿ ಅಲ್ಲಿ ಮಾರ್ಕೆಟ್ ರೋಡ್‌ನಲ್ಲಿ ‘ಗಜಾನನ ಭವನ’ ಎಂಬ ಸ್ವಲ್ಪ ದೊಡ್ಡ ಮಟ್ಟದ ಹೋಟೇಲ್ ಆರಂಭಿಸಿದರು. ಅದು ಅವರ ಕೈಹಿಡಿಯಿತು. ಕನಸಿನ ಉದ್ಯಮವಾಗಿ ಬೆಳೆಯಿತು. ತನ್ನ ಗುಣಮಟ್ಟದ ಕಾರಣ ಗಿರಾಕಿಗಳನ್ನು ಆಕರ್ಷಿಸಿತು. ಬೆಳಿಗ್ಗಿನಿಂದ ಸಂಜೆಯವರೆಗೆ ಗಿರಾಕಿಗಳಿಂದ ತುಂಬಿರುತ್ತಿತ್ತು. ಅದೇ ಪ್ರೇರಣೆಯಾಗಿ ತಮ್ಮ ಬಂಧುವರ್ಗದ ಕೆಲವರನ್ನು ಹೋಟೇಲ್ ಉದ್ಯಮಕ್ಕೆ ಸೆಳೆದರು. ಅವರಿಗೆ ಆಸರೆಯಾಗಿ ನಿಂತರು. ಬಳ್ಳಾರಿಯಲ್ಲಿಯೇ ನೆಲೆನಿಂತು "ಬಳ್ಳಾರಿ ದೇವರಾಯ"ರೆಂದೇ ಪರಿಚಿತರಾದರು.

ಗದಗದಲ್ಲಿದ್ದಾಗಲೇ ಅವರ ಸಂಸಾರ ಜೀವನ ಆರಂಭವಾಯಿತು. ದಿ| ಕುಕ್ಕಿಕಟ್ಟೆ ದಾಸಪ್ಪಯ್ಯನವರ ಮಗಳು ಶಾಂತಾರನ್ನು ವಿವಾಹವಾದರು. ಅಲ್ಲಿ ಅವರ ನಾಲ್ಕು ಮಂದಿ ಗಂಡು ಮಕ್ಕಳು–ಉದಯ, ರಾಘವೇಂದ್ರ, ಪ್ರಕಾಶ್ ಮತ್ತು ಅರುಣ ಜನಿಸಿದರು. ಪುತ್ರ ರಾಘವೇಂದ್ರ 6ನೇ ವಯಸ್ಸಿನಲ್ಲಿ ತೀರಿಕೊಂಡು ಉಳಿದ ಮೂರು ಮಂದಿ ಬೆಳೆದು ದೊಡ್ಡವರಾದಾಗ ಸುಸಂಸ್ಕೃತರಾದ ಮೂವರು ಸೊಸೆಯಂದಿರು ಮನೆ ಬೆಳಗಿದರು.

ಕೊನೆಯವಳು ಮಗಳು ಗೀತಾ ಹುಟ್ಟಿದ್ದು ಬಳ್ಳಾರಿಯಲ್ಲಿ. ಅವಳ ಮದುವೆ ಸಿಂಡಿಕೇಟ್ ಬ್ಯಾಂಕಿನ (ಪ್ರಸಕ್ತ ಉಪ ಮಹಾಪ್ರಬಂಧಕ) ವಿಜಯ ಕುಮಾರ್ ಜತೆ ನಡೆದಿತ್ತು.

ಊರವರು ಹಾಗೂ ಬಂಧುಗಳ ಬಗ್ಗೆ ಅವರಿಗೆ ಅಪಾರ ಅಭಿಮಾನ, ಮಮತೆ. ಮಂತ್ರಾಲಯಕ್ಕೆ ಹೋಗುವವರು ಮಧ್ಯೆ ಒಂದೆರೆಡು ದಿನ ತಪ್ಪದೆ ಅವರ ಮನೆಯಲ್ಲಿದ್ದು ಮರಳುತ್ತಿದ್ದರು. ಹಾಗೇ ಹೋಗಲು ಇವರು ಬಿಡುತ್ತಿರಲಿಲ್ಲ.

ವಿದ್ಯಾಭಿಮಾನಿಯಾಗಿದ್ದ ಅವರು ಆಸಕ್ತ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಒತ್ತಾಸೆಯಾಗಿದ್ದರು. ಕೊಡುಗೈ ದಾನಿಯೂ, ದೈವಬೀರುವೂ ಆಗಿದ್ದು ತನ್ನೂರಿನ ವಿಷ್ಣುಮೂರ್ತಿ ದೇಗುಲದ ಜೀರ್ಣೋದ್ಧಾರಕ್ಕೆ ವಿಶೇಷವಾಗಿ ಸಹಕರಿಸಿದ್ದರು.

ಹೋಟೆಲ್ ವ್ಯವಹಾರವನ್ನು ನೋಡಿಕೊಳ್ಳಲು ಮಕ್ಕಳು ಶಕ್ತರಾದಾಗ ಆ ಜವಾಬ್ದಾರಿಯನ್ನು ಅವರಿಗೆ ವಹಿಸಿ ತಾನು ಉಡುಪಿಯಲ್ಲಿ ನೆಲೆಸಿದರು. ಸಂಘಟನಾ ಚತುರರಾಗಿದ್ದ ಅವರು ಇಳಿ ವಯಸ್ಸಿನಲ್ಲೂ ಕುಟುಂಬ ಸಮಾರಂಭಗಳ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಬಳ್ಳಾರಿಯಲ್ಲಿದ್ದ ಹೋಟೆಲ್ ನಿರ್ವಹಣೆಯಲ್ಲೂ ಅವರ ಪಾತ್ರ ಮುಂದುವರೆದಿತ್ತು. ಇಳಿವಯಸ್ಸಿನಲ್ಲೂ ಅವರು ಮನೆಯವರೆಲ್ಲರ ಪಾಲಿಗೆ ಹೀರೋ ಆಗಿದ್ದರು. ಅವರ ಸುತ್ತ ಮುತ್ತ ಇದ್ದ ಬಂಧುಗಳು ಅವರನ್ನು “ದೇವೆರ್” ಎಂದೇ ಸಂಭೋಧಿಸುತ್ತಿದ್ದರು. ಅವರ ಆಶ್ರಯದಲ್ಲಿ ಬೆಳೆದ ಮೊಮ್ಮಕ್ಕಳು ಕಲಿತು ಇಂಜಿನಿಯರ್ ಪದವಿ ಪಡೆದು, ಬೇರೆ ಬೇರೆ ಕಡೆ ಉದ್ಯೋಗದಲ್ಲಿದ್ದಾರೆ.

ಹಾಗೆಂದು ಅವರ ಬದುಕು ಹೂವಿನ ಹಾಸಿಗೆಯೇನು ಆಗಿರಲಿಲ್ಲ. ಆರಂಭದ ಕಷ್ಟದ ದಿನಗಳು ಬದುಕನ್ನು ಕಟ್ಟಿಕೊಟ್ಟಿದ್ದವು ನಿಜ. ಆದರೆ ಮಕ್ಕಳಾದ ರಾಘವೇಂದ್ರ ಹಾಗೂ ಉದಯರ ಅಕಾಲ ಮೃತ್ಯು ಅವರಿಗೆ ಆಘಾತವನ್ನೇ ನೀಡಿದ್ದವು.

ವರ್ಷ 2016ರಲ್ಲಿ ಮಡದಿ ಶಾಂತಾ ಅವರನ್ನು ಒಂಟಿಯಾಗಿ ಬಿಟ್ಟು ಹೋಗಿದ್ದರು. ಆದರೂ ಧೃತಿಗೆಡದ ಅವರು ದಿಟ್ಟತನದ ಬಾಳನ್ನೇ ಬಾಳಿ 1917 ಜುಲೈ ತಿಂಗಳ 31ರಂದು ತಮ್ಮ 80ನೇ ವಯಸ್ಸಿನಲ್ಲಿ ವಿಧಿವಶರಾದರು.

ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಶ್ರೀಶಾರದಾ ಬಳಗ ಹಾರೈಸುತ್ತದೆ.

## ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 16–08–2017 | ಸಿಂಹ ಸಂಕ್ರಮಣ | 05–09–2017 | ಅನಂತನ ಚತುರ್ದಶಿ |
| | ಸೋಣ ತಿಂಗಳಾರಂಭ | 06–09–2017 | ಹುಣ್ಣಿಮೆ, ಯಜುರ್ಪಾಕರ್ಮ |
| 18–08–2017 | ಸರ್ವೈಕಾದಶಿ | 07–09–2017 | ಮಹಾಲಯ ಪಕ್ಷಾರಂಭ |
| 21–08–2017 | ಅಮಾವಾಸ್ಯೆ | | ಭಾದ್ರಪದ ಕೃಷ್ಣಪಕ್ಷಾರಂಭ |
| 22–08–2017 | ಭಾದ್ರಪದಮಾಸದ ಶುಕ್ಲಪಕ್ಷಾರಂಭ | 09–09–2017 | ಸಂಕಷ್ಟಹರ ಚತುರ್ಥಿ |
| 24–08–2017 | ಗೌರೀತೃತೀಯಾ | 13–09–2017 | ಉಡುಪಿ ಸೌರ ಶ್ರೀಕೃಷ್ಣ ಜನ್ಮಾಷ್ಟಮಿ |
| 25–08–2017 | ಗಣೇಶಚತುರ್ಥಿ, ಸಾಮೋಪಾಕರ್ಮ | 14–09–2017 | ಶ್ರೀಕೃಷ್ಣಲೀಲೋತ್ಸವ |
| 02–09–2017 | ಸರ್ವೈಕಾದಶಿ | 16–09–2017 | ಕನ್ಯಾ ಸಂಕ್ರಮಣ, ಸರ್ವೈಕಾದಶಿ |
| 04–09–2017 | ಋಗುಪಾಕರ್ಮ | 20–09–2017 | ಮಹಾಲಯ ಅಮಾವಾಸ್ಯೆ |


**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ ”ಡಿ” ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್– 9886629697, 9986119865


## ನಿಧನ

### ಪಡುಮಲೆ ಶರವು ಕೃಷ್ಣಯ್ಯ

ಬಡಗನ್ನೂರು ಪಡುಮಲೆ ನಿವಾಸಿ ಶರವು ಕೃಷ್ಣಯ್ಯ (98ವ)ರವರು ಅಲ್ಪಕಾಲದ ಅಸೌಖ್ಯದಿಂದ ಜು.9ರಂದು ನಿಧನರಾಗಿದ್ದಾರೆ. ಮೃತರು ಪತ್ನಿ, ನಾಲ್ಕು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಇವರು ಪುತ್ತೂರು ಸ್ಥಾನಿಕ ಬ್ರಾಹ್ಮಣ ಸಂಘ, ಬಡಗನ್ನೂರು ಪಟ್ಟೆ ವಿದ್ಯಾಸಂಸ್ಥೆಯ ಸಕ್ರಿಯ ಸದಸ್ಯರಾಗಿದ್ದರು. ಬಡಗನ್ನೂರು ವಿಷ್ಣುಮೂರ್ತಿ ದೇವಸ್ಥಾನದ ಭಜನಾ ಸಂಘದ ಸ್ಥಾಪಕಾಧ್ಯಕ್ಷರಾಗಿದ್ದು, ತನ್ನ ಇಳಿವಯಸ್ಸಿನಲ್ಲೂ ಭಜನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರು. ಮೃತರ ಮನೆಗೆ ಹಲವಾರು ಗಣ್ಯರು ಭೇಟಿ ನೀಡಿ ಸಂತಾಪ ಸೂಚಿಸಿದರು.

### ಪುರುಷೋತ್ತಮ ರಾವ್

ಪಾಂಡೇಶ್ವರ ಸಾಸ್ತಾನದ ನಿವಾಸಿ ಶ್ರೀ ಪುರುಷೋತ್ತಮ ರಾವ್‌ರವರು 03.07.2017ರಂದು ಸ್ವಗೃಹದಲ್ಲಿ ನಿಧನ ಹೊಂದಿದರು.

### ಕೆ. ಶ್ರೀಧರ ರಾವ್

ಮಂದಾರ್ತಿ ಕಲ್ಲುದೇವಸ್ಥಾನ ಬಳಿಯ ನಿವಾಸಿ ಶ್ರೀ ಕೆ. ಶ್ರೀಧರ ರಾವ್ ರವರು 08.07.2017 ರಂದು ನಿಧನ ಹೊಂದಿದರು.

### ಬೋಳ ವಾಸುದೇವ ರಾಯರು

ಮೂಡುಬಿದ್ರೆ ಬಳಿಯ ಅಳಿಯೂರಿನಲ್ಲಿ ವಾಸವಾಗಿದ್ದ ಶ್ರೀ ಬೋಳ ವಾಸುದೇವ ರಾಯರು ಅಲ್ಪಕಾಲದ ಅನಾರೋಗ್ಯದಿಂದ 16.7.2017ರಂದು ತಮ್ಮ 79 ವರ್ಷ ಪ್ರಾಯದಲ್ಲಿ ನಿಧನರಾಗಿದ್ದಾರೆ.

### ಶ್ರೀಮತಿ ಸತ್ಯಭಾಮ

ಕಡಿಯಾಳಿ ನಿವಾಸಿ ಬಪ್ಪನಾಡು ಭವಾನಿ ಶಂಕರರಾವ್‌ರವರ ಪತ್ನಿ ಶ್ರೀಮತಿ ಸತ್ಯಭಾಮ ರವರು 30.07.2017ರಂದು ತಮ್ಮ 88ನೇ ವರ್ಷ ಪ್ರಾಯದಲ್ಲಿ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

## ಅಭಿನಂದನೆ

ಸಿದ್ದಾಪುರದ ಶ್ರೀ ಮೋಹನದಾಸ ಹೆಗಡೆ ಹಾಗೂ ಇಂದಿರಾರವರ ಪುತ್ರಿ ಶ್ರೀನಿಧಿ ಹೆಗಡೆ ಇವಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 597 ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾಳೆ

## ವೀಣಾ ವಾದನ



ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಸರಣಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಉಡುಪಿಯ ದಿಶಾ ಪಿ. ರಾವ್ ವೀಣಾ ವಾದನವನ್ನು ಪ್ರಸ್ತುತ ಪಡಿಸಿದರು.

## ಉಪನಯನ

ಶ್ರೀಮತಿ ಚೈತನ್ಯ ಹಾಗೂ ಶ್ರೀ ರಮೇಶ ರಾವ್ ಇವರ ಪುತ್ರ ಕೀರ್ತನ್‌ನ ಬ್ರಹ್ಮೋಪದೇಶ ಸಮಾರಂಭವು ತಾ 18–06–2017 ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಶುಭ ವಿವಾಹ

ಮಠದಬೆಟ್ಟು ಶ್ರೀ ಎಮ್. ನಾಗೇಶ ಶರ್ಮ ಹಾಗೂ ಶ್ರೀಮತಿ ಭುವನೇಶ್ವರಿ ಇವರ ಪುತ್ರ **ಪ್ರಶಾಂತ್** ಹಾಗೂ ಶಿರ್ಲಾಡಿ ಶ್ರೀ ಮಹಾದೇವ ರಾವ್ ಹಾಗೂ ಶ್ರೀಮತಿ ಲಕ್ಷ್ಮಿ ಇವರ ಪುತ್ರಿ **ಶುಭಾ** ಇವರ ವಿವಾಹವು ತಾ.12.07.2017 ರಂದು ಮಿಯ್ಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶುಭ ಜನನ

ಶ್ರೀಮತಿ ಉಷಾ ಮೋಹನ್‌ದೇವ್ ಇವರ ಪುತ್ರ ಅಮಿತ್ ಹಾಗೂ ಸೊಸೆ ಯಶಸ್ವಿನಿ ಇವರಿಗೆ ತಾ.02–08–2017ನೇ ಬುಧವಾರ ಗಂಡು ಮಗುವಿನ ಜನನವಾಗಿರುತ್ತದೆ.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com



# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಆಟಿತೊ ಆಟ ಕೂಟ"



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಯುವ ವೇದಿಕೆ ಮತ್ತು ಮಹಿಳಾ ವೇದಿಕೆ ಆಶ್ರಯದಲ್ಲಿ "ಆಟಿತೊ ಆಟ ಕೂಟ" ಎಂಬ ವಿಶೇಷ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ ಆಟಿಯ ಸಾಂಪ್ರದಾಯಿಕ ಆಟವಾದ "ಚೆನ್ನೆ ಮಣೆ" ಸ್ಪರ್ಧೆಯನ್ನು ಬೆಳ್ತಂಗಡಿಯ ಶ್ರೀ ಸದಾಶಿವ ರಾವ್ ಮತ್ತು ಸುರತ್ಕಲ್‌ನ ಶ್ರೀ ಲಕ್ಷ್ಮೀನಾರಾಯಣ ರಾವ್‌ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಕೇರಂ ಪಂದ್ಯಾಟವನ್ನು ಎರಡು ವಿಭಾಗದಲ್ಲಿ ಮತ್ತು ಚೆಸ್ ಪಂದ್ಯಾಟವನ್ನು ಮುಕ್ತ ವಿಭಾಗದಲ್ಲಿ ನಡೆಸಲಾಯಿತು. ಮಧ್ಯಾಹ್ನ ಆಟಿಯ ವಿಶೇಷ ಖಾದ್ಯಗಳಾದ ಪೂಂಬೆ ಚಟ್ನಿ, ಉಪ್ಪಡ್ ಪಚ್ಚಿಲ್ ಪಲ್ಯ, ಕುಡುಸಾರ್, ಗುಜ್ಜೆ ಸಾಂಬಾರ್, ಹಾಲ್ ಬಾಯಿ, ಪೇರಡ್ಯ ಪಾಯಸ, ಪತ್ರೊಡೆಗಳನ್ನು ಮಾಡಲಾಗಿತ್ತು. ಮಧ್ಯಾಹ್ನ ನಂತರದ ಕಾರ್ಯಕ್ರಮದಲ್ಲಿ ಡಾ. ಬಿ.ಎಚ್. ಸಂದೀಪ್ ರಾವ್, ಮೂಲ್ಕಿಯವರಿಂದ ಆಟಿಯ ಕಷಾಯ, ಆಟಿಯಲ್ಲಿ ತಿನ್ನಬೇಕಾದ ಖಾದ್ಯಗಳು ಹಾಗೂ ಆಯುರ್ವೇದ ವೈದ್ಯ ಪದ್ಧತಿಯ ಬಗ್ಗೆ ಉಪನ್ಯಾಸ ಮತ್ತು ಸಂವಾದ ನಡೆಯಿತು. ನಂತರ ಸಮಾಜದ ಪ್ರತಿಭೆಗಳಿಂದ ಕೆರೋಕೆ ರಸಮಂಜರಿ ನಡೆಯಿತು. ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಮನೀಶ್ ರಾವ್, ಉಪಾಧ್ಯಕ್ಷರಾದ ಶ್ರೀ ಅನಿಲ್ ಎನ್., ಮಹಿಳಾ ವೇದಿಕೆಯ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಡಾ. ಜಯಲಕ್ಷ್ಮೀ, ಶ್ರೀಮತಿ ಕುಸುಮಾ ನವೀನ್ ಕುಮಾರ್ ಕಾರ್ಯಕ್ರಮ ಸಂಯೋಜಿಸಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಮ್.ಆರ್ ವಾಸುದೇವರು ಚೆಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಸ್ಪರ್ಧಾಳುಗಳಿಗೆ ಸ್ಫೂರ್ತಿ ತುಂಬಿದರು. ಶ್ರೀ ಸಭಾದ ಪದಾಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರೆ ಯುವ ವೇದಿಕೆಯ ಕಾರ್ಯದರ್ಶಿ ಶ್ರೀ ಸುರೇಶ್ ಕಡಬ ವಂದನಾರ್ಪಣೆ ನೀಡಿದರು. ಬಹುಮಾನ ವಿತರಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್
ವರದಿ : ಶ್ರೀ ಪಿ. ಶ್ರೀಕಾಂತ್ ರಾವ್

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ(ರಿ.) ಸುರತ್ಕಲ್ : ಆಟಿಡೊಂಜಿ ದಿನ ಆಚರಣೆ



ದಿನಾಂಕ: 30.07.2017ನೇ ರವಿವಾರ ಬೆಳಿಗ್ಗೆ ಗಂಟೆ 11:00ಕ್ಕೆ ಮಾನಸ ಕಟ್ಟಡದಲ್ಲಿರುವ ವಿವೇಕಾನಂದ ಸಭಾಗೃಹ, ಸುರತ್ಕಲ್‌ನಲ್ಲಿ ಸಂಘದ ವತಿಯಿಂದ "ಆಟಿಡೊಂಜಿ ದಿನ" ಕಾರ್ಯಕ್ರಮವು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿ ಶ್ರೀ ಮೋಹನ್ ರಾವ್ ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರಿ ಇವರು ಉಪಸ್ಥಿತರಿದ್ದರು. ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ ಮಾಧವ ರಾವ್ ಇವರು ಎಲ್ಲರನ್ನೂ ಸ್ವಾಗತಿಸುತ್ತಾ ಕಾರ್ಯಕ್ರಮದ ವೈಶಿಷ್ಟತೆಯನ್ನು ವಿವರಿಸಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್ ಇವರು ತುಳುನಾಡಿನಲ್ಲಿ ಆಟಿ ತಿಂಗಳ ಮಹತ್ವವನ್ನು ಉತ್ತಮ ರೀತಿಯಲ್ಲಿ ಸಭೆಗೆ ವಿವರಿಸಿದರು. ವೇದಿಕೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್, ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಯವರಾದ ಶ್ರೀ ಪ್ರವೀಣ್ ಕುಮಾರ್ ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪಡುಬಿದ್ರಿ ಸಂಘದ ಹಾಗೂ ಸುರತ್ಕಲ್ ಸಂಘದ ಹೆಚ್ಚಿನ ಸದಸ್ಯರು ಉಪಸ್ಥಿತರಿದ್ದರು. ಸಂಯೋಜಕರಾಗಿ ಶ್ರೀ ರಾಘವೇಂದ್ರ ರಾವ್ ಹಾಗೂ ಧನ್ಯವಾದವನ್ನು ಶ್ರೀ ಪಾಲಚಂದ್ರ ಶರ್ಮರವರು ನೆರವೇರಿಸಿದರು. ನಂತರ ಮಹಿಳಾ ವೇದಿಕೆಯ ವತಿಯಿಂದ ಶ್ರೀಮತಿ ವೀಣಾ, ಶ್ರೀಮತಿ ಭಾರ್ಗವಿ, ಶ್ರೀಮತಿ ಪ್ರಶಾಂತಿ ಹಾಗೂ ಶ್ರೀ ಸುಕುಮಾರ್ ಇವರುಗಳ ಸಹಕಾರದಿಂದ ಪುರುಷರಿಗೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಕೆಲವು ಆಟೋಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ನಂತರ ಮಹಿಳಾ ವೇದಿಕೆಯ ಸದಸ್ಯರಿಂದ ಅವರವರ ಮನೆಯಿಂದ ತಯಾರಿಸಿ ತಂದ ಆಟಿ ತಿಂಗಳ ಮಹತ್ವದ ಬಗೆಬಗೆಯ ತಿಂಡಿಯನ್ನು ಸದಸ್ಯರೆಲ್ಲರೂ ಸಂತೋಷದಿಂದ ಸ್ವೀಕರಿಸಿದ ನಂತರ ಕಾರ್ಯಕ್ರಮವನ್ನು ಸಮಾಪ್ತಿಗೊಳಿಸಲಾಯಿತು. ಆಟೋಟ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಕುಸುಮಾ ಹಾಗೂ ಶ್ರೀಮತಿ ಸ್ವರ್ಣಗೌರಿ ಇವರು ಸಹಕರಿಸಿದರು.



## ಸಂತೋಷ್‌ರಾವ್ ಇವರಿಗೆ ಡಾಕ್ಟರೇಟ್

ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯದ ಮಾಹಿತಿ ತಂತ್ರಜ್ಞಾನ ಹಾಗೂ ಸಂವಹನ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಸಂತೋಷ್‌ರಾವ್, ಬಾರ್ಕೂರು ಅವರು ಮಂಡಿಸಿದ "ಡಿಸೈನ್ ಆ್ಯಂಡ್ ಇಂಪ್ಲಿಮೆಂಟೇಶನ್ ಆಫ್ ಕ್ರಾಸ್ ಲೇಯರ್ ಮಾಡೆಲ್ ಫಾರ್ ಮಲ್ಟಿಮೀಡಿಯ ಟ್ರಾನ್ಸ್‌ಮಿಶನ್ ಇನ್ ಎನರ್ಜಿ ಕನ್‌ಸ್ಟ್ರೈನ್ಡ್ ವಯರ್‌ಲೆಸ್ ನೆಟ್‌ವರ್ಕ್ಸ್" ಎಂಬ ಸಂಶೋಧನಾ ಪ್ರಬಂಧಕ್ಕೆ ಮಣಿಪಾಲ ವಿಶ್ವವಿದ್ಯಾಲಯವು ಡಾಕ್ಟರೇಟ್ ನೀಡಿ ಗೌರವಿಸಿದೆ. ವಿದ್ಯುನ್ಮಾನ ಹಾಗೂ ಸಂಪರ್ಕ ವಿಭಾಗದಲ್ಲಿ ಪ್ರೊಫೆಸರ್ ಆಗಿರುವ ಡಾ। ಕುಮಾರ ಶ್ಯಾಮರ ಮಾರ್ಗದರ್ಶನದಲ್ಲಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದರು. ಸಂಘದ ಯುವ ವೇದಿಕೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಇವರು ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಬಳಗದ ಸಕ್ರಿಯ ಸದಸ್ಯರಾಗಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.



## ಭೀಮರಥೀ ಶಾಂತಿ

ನಮ್ಮ ಸಂಘದ ಕೋಶಾಧಿಕಾರಿಗಳಾದ ಶ್ರೀ ಕೆ. ಸುಧಾಕರ ರಾಯರು ತಾವು 70 ವರ್ಷ ಪೂರ್ಣಗೊಳಿಸಿದುದರ ಪ್ರಯುಕ್ತ ತಮ್ಮ ಪತ್ನಿ ಶ್ರೀಮತಿ ಜ್ಯೋತಿ, ಹಾಗೂ ಕುಟುಂಬಸ್ಥರೊಂದಿಗೆ ರಥಬೀದಿಯ ರಾಯರ ಮಠದ ಸಭಾಂಗಣದಲ್ಲಿ ಭೀಮರಥಿ ಶಾಂತಿಯನ್ನು ನೆರವೇರಿಸಿದರು

## ನಿವೃತ್ತಿ



ಉಡುಪಿ ಬೈಲೂರಿನ ವಾಸುಕೀನಗರದ ಶ್ರೀ ವೈ. ಪ್ರದೀಪ್ ಕುಮಾರ್‌ರವರು ತಾ.30.4.2017 ರಂದು ಅಂಚೆಕಛೇರಿಯ ವೃತ್ತಿಯಿಂದ ನಿವೃತ್ತರಾದರು. ಅವರು ಉಡುಪಿ, ಪಡುಬಿದ್ರೆ, ಬ್ರಹ್ಮಾವರ, ಮೂಡಬಿದ್ರೆ ಇತ್ಯಾದಿ ಕಡೆಗಳಲ್ಲಿ ಪೋಸ್ಟ್‌ಮಾಸ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. ಅವರ ನಿವೃತ್ತಿಯ ಸಂದರ್ಭದಲ್ಲಿ ಇಲಾಖೆಯಿಂದ ಅವರ ಅಭಿಮಾನಿಗಳು ವಿದಾಯ ಸಮಾರಂಭವನ್ನು ಏರ್ಪಡಿಸಿದ್ದರು.

# ಬೆಳ್ತಂಗಡಿ ಸಂಘದಿಂದ ಆಟಿಡೊಂಜಿ ದಿನ

ತಾ.30–07–2017ರಂದು ಶ್ರೀಮತಿ ಮತ್ತು ಶ್ರೀ ದಿವಾಕರ್ ರಾವ್ ಕನ್ಯಾಡಿ ಇವರ ನಿವಾಸ ಶ್ರೀನಿವಾಸ ಕೃಪಾದಲ್ಲಿ ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಆಟಿಡೊಂಜಿ ದಿನ ಕಾರ್ಯಕ್ರಮ ನೆರವೇರಿತು

ಬೆಳಗ್ಗಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷರಾದ ಶ್ರೀ ಬಿ.ಕೆ ಧನಂಜಯ ರಾವ್, ಮಂಗಳೂರು ಕೋಟೆಕಾರಿನ ಶಂಕರ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ, ಧರ್ಮಸ್ಥಳ ಸ್ಥಾನಿಕ ಬ್ರಾಹ್ಮಣ ವಲಯದ ಅಧ್ಯಕ್ಷ ಶ್ರೀ ಸತೀಶ ಉಡುಪಿ, ಧರ್ಮಸ್ಥಳ ಸ್ಥಾನಿಕ ಬ್ರಾಹ್ಮಣ ವಲಯದ ಕಾರ್ಯದರ್ಶಿ ಶ್ರೀ ಹರೀಶ ಕೊಠಾರಿ, ಶ್ರಿ ದಿನೇಶ ಕುಮಾರ್ ಎಮ್ ಎಸ್. ರವರು ಉಪಸ್ಥಿತರಿದ್ದರು. ಸಮಾಜಬಾಂಧವರಿಗೆ ವಿವಿಧ ಸ್ಪರ್ಧೆಗಳು ನಡೆದವು. ಭೋಜನದ ನಂತರ ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ರಘುಚಂದ್ರರಾವ್ ಧರ್ಮಸ್ಥಳ , ಶ್ರೀ ಕೆ ಭಾಸ್ಕರ ಶಾಸ್ತ್ರಿ (ದೇಲಂಪಾಡಿತ್ತಾಯರು) ಬೆಳ್ತಂಗಡಿ ವಲಯದ ಅಧ್ಯಕ್ಷರಾದ ಶ್ರೀ ಬಿ.ಪಿ ಅಶೋಕ್ ಕುಮಾರ್, ಬೆಳ್ತಂಗಡಿ ವಲಯದ ಕಾರ್ಯದರ್ಶಿ ಶ್ರೀಮತಿ ರಮ್ಯಾ ರಾಜಾರಾಮ ರಾವ್, ಶ್ರೀಮತಿ ಹಾಗೂ ಶ್ರೀ ಸುಕುಮಾರ್ ರಾವ್ ಎಮ್. ಎನ್, ಶ್ರೀಮತಿ ಮತ್ತು ಶ್ರೀ ಅರುಣ್ ಕುಮಾರ್ ಎಮ್.ಎಸ್ ಉಪಸ್ಥಿತರಿದ್ದರು

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.09-09-2017 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.31-08-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.26-08-2017 ಮತ್ತು ತಾ.10-09-2017 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರದ್ಧಾಂಜಲಿ



### ಶ್ರೀಮತಿ ಸುಭದ್ರಾ

**ಜನನ:17–07–1945** **ಮರಣ: 13–07–2017**

ಪುತ್ತೂರು ತಾಲೂಕಿನ ಉಪ್ಪಿನಂಗಡಿ ಗ್ರಾಮದ ನೂಜಿ ಪಾದಾಳ ನಿವಾಸಿ, ನಿವೃತ್ತ ಶಿಕ್ಷಕ ಶ್ರೀಧರ ರಾವ್ ಅವರ ಪತ್ನಿ ಸುಭದ್ರಾ ಕ್ಯೊಲ (72) ಶುಕ್ರವಾರ (ತಾ.14–07–2017) ಸ್ವಗ್ರಹದಲ್ಲಿ ನಿಧನ ಹೊಂದಿದರು. ಮೂಲತಃ ಕ್ಯೊಲ ನಿವಾಸಿಯಾಗಿರುವ ಅವರು ಪತಿ ಶ್ರೀಧರ ರಾವ್, ಪುತ್ರರಾದ ಹಿರೇಬಂಡಾಡಿ ಹೈಸ್ಕೂಲು ಶಿಕ್ಷಕ ಹರಿಕಿರಣ ಕ್ಯೊಲ, ವಕೀಲ ರವಿಕಿರಣ ಕ್ಯೊಲ ಹಾಗೂ ಇಬ್ಬರು ಪುತ್ರಿಯರನ್ನೂ, ಅಪಾರ ಬಂಧುವರ್ಗವನ್ನೂ ಅಗಲಿದ್ದಾರೆ.

## ಶ್ರೀ ಶಾರದೆಗೆ ಭಕ್ತಿಪೂರ್ವಕ ಕಾಣಿಕೆ

ಕಾಸರಗೋಡು ಶ್ರೀ ಲಕ್ಷ್ಮೀನಾರಾಯಣ ಶಾನುಭಾಗ್ ಹಾಗೂ ಶ್ರೀಮತಿ ಮೋಹನ ಶಾನುಭಾಗ್ ರ ಪುತ್ರ ಹರ್ಷವರ್ಧನ ಶ್ಯಾನುಭಾಗ್ ಹಾಗು ಶ್ರೀಮತಿ ಜ್ಯೋತಿ (ಕುಂಜಿಬೆಟ್ಟು ವೈ. ಮುರಳೀಧರ್ ರಾವ್ ಹಾಗೂ ಜಯಲಕ್ಷ್ಮಿ ದಂಪತಿಗಳ ಪುತ್ರಿ) ದಂಪತಿಗಳು ಕುಂಜಿಬೆಟ್ಟಿನ ಶ್ರೀ ಶಾರದಾ ದೇವಿಗೆ ಬಂಗಾರದ ಹಾರವನ್ನು ಕಾಣಿಕೆಯಾಗಿ ಸಮರ್ಪಿಸಿದ್ದಾರೆ. ಶ್ರೀ ಹರ್ಷವರ್ಧನ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳಿಗೆ ಶ್ರೀ ದೇವಿಯ ಕೃಪಾಕಟಾಕ್ಷ ಸದಾ ಇರಲೆಂದು ಆಡಳಿತಮಂಡಳಿಯು ಪ್ರಾರ್ಥಿಸುತ್ತದೆ.

## ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ

ಬೆಂಗಳೂರಿನ ಶ್ರೀ ಪಿ.ಬಾಲಕೃಷ್ಣ ಹಾಗೂ ಶ್ರೀಮತಿ ಸಾವಿತ್ರಿರವರು ನಮ್ಮ ಸಂಘದ ವಿದ್ಯಾರ್ಥಿವೇತನ ನಿಧಿಗೆ ರೂಪಾಯಿ ಹತ್ತು ಸಾವಿರ ಗಳನ್ನು ದೇಣಿಗೆಯಾಗಿ ನೀಡಿದ್ದಾರೆ ಅವರಿಗೆ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ

## ದೆಹಲಿ ಕರ್ನಾಟಕ ಸಂಘದಲ್ಲಿ ಇನ್ನ ರಾಮಮೋಹನ ರಾಯರಿಗೆ ನುಡಿನಮನ



ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರ ನೇತೃತ್ವದಲ್ಲಿ ಇತ್ತೀಚೆಗೆ ಅಗಲಿದ ಅಜಾತಶತ್ರು ಮಾಧ್ಯಮ ಭೀಷ್ಮ ಇನ್ನ ರಾಮಮೋಹನ್ ರಾಯರಿಗೆ ನುಡಿನಮನ ಕಾರ್ಯಕ್ರಮ ಜರಗಿತು. ಕರ್ನಾಟಕ ಸಂಘದ ಪದಾಧಿಕಾರಿಗಳಾಗಿದ್ದ ಶ್ರೀ ಬೆಳ್ಳಾರೆ, ಅವನೀಂದ್ರ ರಾವ್, ನ್ಯಾಯಮೂರ್ತಿ ಹೆಗ್ಗಡೆ, ದೀವಿಕಾ ಸಂಪಾದಕ, ಜೆ.ಎನ್.ಯು. ಕನ್ನಡ ಪೀಠ ಮುಖ್ಯಸ್ಥ ಡಾ. ಬಳಿಮಲೆ ಹಾಗೂ ಮುದ್ದಣ ಪ್ರಕಾಶನದ ಗೌರವ ನಿರ್ದೇಶಕ ನಂದಳಿಕೆ ಬಾಲಚಂದ್ರ ರಾವ್ ಮತ್ತು ಕುಟುಂಬದ ಸದಸ್ಯರಾದ ಶ್ರೀಮತಿ ರಾಜೇಶ್ವರಿ ರಾಮ್‌ಮೋಹನ್ ರಾವ್ ಹಾಗೂ ಎ.ಎನ್.ಐ. ಸಂಪಾದಕಿ ಶ್ರೀಮತಿ ಸ್ಮಿತಾ ಪ್ರಕಾಶ್ ಕುಟುಂಬದವರು ಮೊದಲಾದವರು ನುಡಿನಮನ ಸಲ್ಲಿಸಿದ್ದರು.

ಕರ್ನಾಟಕ ಬ್ಯಾಂಕಿನ ನಿರ್ದೇಶಕರಾಗಿ ನಾಲ್ವರು ಪ್ರಧಾನಿಗಳ ವಾರ್ತಾ ಸಲಹೆಗಾರರಾಗಿ ಅನುಪಮ ಸೇವೆ ಸಲ್ಲಿಸಿದ್ದ ಶ್ರೀ ರಾಮಮೋಹನ್ ರಾವ್ ಅವರ ನಿಧನ ಈ ದೇಶಕ್ಕೆ ತುಂಬಲಾರದ ನಷ್ಟ ಎಂದು ಅಭಿಪ್ರಾಯಪಟ್ಟರು. ಕಾರ್ಯದರ್ಶಿ ನಾಗರಾಜ್ ವಂದಿಸಿದ್ದರು. ಶ್ರೀಮತಿ ಕಾರಿಂಜ ನಿರೂಪಿಸಿದ್ದರು.



# ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಚಾತುರ್ಮಾಸ್ಯ ವ್ರತ, ವ್ಯಾಸ ಪೂಜೆ, ಋಕ್ ಸಂಹಿತಾ ಯಾಗ, ಶ್ರೀ ಘನಪುರೀ ಸಂಸ್ಥಾನ ಕೋದಂಡಾಶ್ರಮ ಮಠ, ಹೆಬ್ಬಾರು



ಇಲ್ಲಿಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳು 09.07.2017 ರಿಂದ, ಸೆಪ್ಟೆಂಬರ್ 06 ಬುಧವಾರ 2017 ರವರೆಗೆ ಕೈಗೊಳ್ಳುತ್ತಿರುವ ಚಾತುರ್ಮಾಸ್ಯ ವ್ರತದ ಪ್ರಯುಕ್ತ ಗುರುಪೂರ್ಣಿಮೆ/ವ್ಯಾಸಪೂಜೆಯು 09.07.2017ರಂದು ನೆರವೇರಿತು. ಶ್ರೀ ಕ್ಷೇತ್ರದ ಆಡಳಿತ ಅಧಿಕಾರಿಯಾಗಿರುವ ನಮ್ಮವರೇ ಆದ ಶ್ರೀ ಸುಬ್ರಹ್ಮಣ್ಯ ರಾವ್ ಕೆ. ರವರು ಅಧ್ವರ್ಯುಗಳಾಗಿ ಲಲಿತಾ ಹೋಮದಿಂದ ಪ್ರಾರಂಭಗೊಂಡು, ಶ್ರೀ ಶ್ರೀ ಮಹಾಸ್ವಾಮಿಗಳು ವ್ಯಾಸಪೂಜೆಯನ್ನು ಶ್ರೀ ಕೇಶವ ಶರ್ಮ ಮತ್ತು ಮಂಡ್ಯದ ಧರ್ಮಾಧಿಕಾರಿ ಶ್ರೀ ಗಿರೀಶ್‌ರ ಪೌರೋಹಿತ್ಯದೊಂದಿಗೆ ನೆರವೇರಿಸಿ, ಚಾತುರ್ಮಾಸ್ಯ ವ್ರತ ಸಂಕಲ್ಪವನ್ನು ಕೈಗೊಂಡು ವ್ರತಾನುಯಾಯಿಗಳಾಗಿದ್ದಾರೆ. ಹಾಸನ, ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರಿನಿಂದ ಬಂದಂತಹ ಮಠದ ಭಕ್ತಾನುಯಾಯಿಗಳಿಂದ ಶ್ರೀ ಶ್ರೀಗಳಿಗೆ ಫಲ, ಧಾನ್ಯ, ಹೊರೆ ಕಾಣಿಕೆಗಳನ್ನು ಭಿಕ್ಷಾವಂದನೆಯನ್ನು ಅರ್ಪಿಸಲಾಯಿತು.

ಅನುಗ್ರಹ ಭಾಷಣದಲ್ಲಿ ಶ್ರೀ ಶ್ರೀ ಗಳು ವ್ಯಾಸಪೂಜೆಯ ಅಗತ್ಯತೆಯನ್ನು ವಿವರಿಸಿದರು. ವ್ಯಾಸಮುನಿಗಳ ಶಿಷ್ಯರು ಅವರ ಆರಾಧನೆಯನ್ನು ಮಾಡಲು ಕೇಳಿಕೊಂಡಾಗ, ವ್ಯಾಸಮುನಿಗಳು ಎಲ್ಲವರೂ ಆಷಾಡ ಮಾಸ, ಕೃಷ್ಣ ಪಕ್ಷ ಹುಣ್ಣಿಮೆಯಂದು ತಮ್ಮ ಗುರುವಿನ ಪೂಜೆಯನ್ನು ಮಾಡುವುದರ ಮೂಲಕ ತಮ್ಮ ಆರಾಧನೆಯನ್ನು ಮಾಡಿ ಎಂದು ಅಪ್ಪಣೆ ಕೊಡುತ್ತಾರೆ. ಆದುದರಿಂದ ಆಷಾಡ ಮಾಸ, ಕೃಷ್ಣ ಪಕ್ಷ ಹುಣ್ಣಿಮೆಯಂದು ವ್ಯಾಸಪೂಜೆಯನ್ನು ಮಾಡುವುದರ ಮೂಲಕ ಗುರುಪೂರ್ಣಿಮೆಯನ್ನು ಆಚರಿಸುತ್ತೇವೆ. ಹಾಗೆಯೇ ಚಾತುರ್ಮಾಸ್ಯ ವ್ರತವನ್ನು ವಿವರಿಸುತ್ತಾ, ಸನ್ಯಾಸಿಗಳು ಯಾವುದೇ ರೀತಿಯ ಅಹಿಂಸೆಯನ್ನೂ ಮಾಡಬಾರದು, ಮನುಷ್ಯ, ಪ್ರಾಣಿ, ಪಕ್ಷಿ, ಮರ, ಗಿಡಗಳಾದಿಯಾಗಿ ಯಾವುದೇ ಜೀವಿಗಳಿಗೆ ಹಿಂಸೆಯನ್ನು ಮಾಡುವಂತಿಲ್ಲ. ಮಳೆಗಾಲ ಪ್ರಾರಂಭವಾದಾಗ, ಮರ, ಗಿಡಗಳು ಚಿಗುರೊಡೆಯುತ್ತವೆ, ಕ್ರಿಮಿಕೀಟಗಳು ಹೆಚ್ಚುತ್ತವೆ, ಸನ್ಯಾಸಿಗಳು ಧರ್ಮ ಪ್ರಚಾರಕ್ಕಾಗಿ, ಭಿಕ್ಷೆಗಾಗಿ ಸಂಚರಿಸುವಾಗ ಇವುಗಳಿಗೆ ತೊಂದರೆಯಾಗಬಾರದು, ಹಿಂಸೆಯಾಗಬಹುದು ಎನ್ನುವ ಕಾರಣಕ್ಕಾಗಿ ನಾಲ್ಕು ಮಾಸಗಳ ಕಾಲ (ಒಂದು ಮಾಸ 15 ದಿನ, ಹಾಗಾಗಿ 60 ದಿನಗಳ ಕಾಲ, ಎರಡು ತಿಂಗಳು) ಎಲ್ಲಿಯೂ ಸಂಚರಿಸದೇ ಒಂದೇ ಸ್ಥಳದಲ್ಲಿ ನೆಲೆ ನಿಂತು ವ್ರತ, ಪೂಜೆಗಳಲ್ಲಿ ನಿರತರಾಗುತ್ತಾರೆ. ಇದೇ "ಚಾತುರ್ಮಾಸ್ಯ ವ್ರತ ಎಂದು ವಿವರಿಸಿದರು. ರಾಜ್ಯದ ಹಲವಾರು ಕಡೆಗಳಿಂದ ಶ್ರೀ ಮಠಕ್ಕೆ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲಾ ಭಕ್ತರಿಗೂ ಶ್ರೀ ಕಾಮಾಕ್ಷೀ-ಶಾರದಾದೇವಿಯು ಹರಸಲಿ ಎಂದು ಆಶೀರ್ವಚಿಸಿದರು. ನೆರೆದ ಭಕ್ತರು ಭಕ್ತಿಯಿಂದ ಮಿಂದೆದ್ದು ಭಾವಪರವಶರಾದರು.

ತಾ.16.07.2017 ರಂದು ಲೋಕ ಕಲ್ಯಾಣಾರ್ಥವಾಗಿ ಜರುಗಿದ ಋಕ್ ಸಂಹಿತಾಯಾಗ (ಶಾಕಲ ಶಾಖೆ) ಪ್ರಾರಂಭೋತ್ಸವವು ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಮಹಾಸ್ವಾಮಿಗಳ ಅಪ್ಪಣೆಯಂತೆ ಬೆಂಗಳೂರಿನ ಧರ್ಮಾಧಿಕಾರಿಯಾದ ಲಕ್ಷ್ಮೀಕಾಂತ್ ದಂಪತಿಗಳು ಅಧ್ವರ್ಯುಗಳಾಗಿ ಭಾಗವಹಿಸುವುದರ ಮೂಲಕ ಶ್ರೀಯುತ ಕೃಷ್ಣಮೂರ್ತಿ ಬಾಯರಿ ನೇತೃತ್ವದಲ್ಲಿ ಶ್ರೀ ಮಠದ ಶಿರೋಮಣಿಗಳ ವೇದ ಘೋಷಣೆಗಳೊಂದಿಗೆ ಸಂಪನ್ನಗೊಂಡಿತು. ಒಂದು ವಾರದ ಕಾಲ ನಡೆದ ಈ ಮಹಾಯಾಗದ ಪೂರ್ಣಾಹುತಿಯು ದಿನಾಂಕ 23.7.2017 ರಂದು ನೆರವೇರಿತು. ಶ್ರೀಯುತ ಕೃಷ್ಣಮೂರ್ತಿ ಬಾಯರಿಯವರ ಪ್ರಧಾನ ಪೌರೋಹಿತ್ಯದಲ್ಲಿ ಸುಮಾರು 23 ವರ್ಷಗಳಿಂದ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ವೇದನಾರಾಯಣನ ಈ ಯಾಗದಲ್ಲಿ ಶ್ರೀ ಶ್ರೀ ಗಳು ದಿವ್ಯಸಾನಿಧ್ಯ ವಹಿಸಿ, ಸಂತಸ ವ್ಯಕ್ತಪಡಿಸಿದರು. ಬೆಳಿಗ್ಗೆ 10.30 ಕ್ಕೆ ಪೂರ್ಣಾಹುತಿಯಾದ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಯಾಗದಲ್ಲಿ ಭಾಗವಹಿಸಿದ ಎಲ್ಲಾ ವಿದ್ವಜ್ಜನರಿಗೆ ಯಥೋಚಿತ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು. ತಮ್ಮ ಅನುಗ್ರಹ ಭಾಷಣದಲ್ಲಿ ಶ್ರೀ ಶ್ರೀ ಗಳು ಭರತಭೂಮಿಯ ಪಾವಿತ್ರ್ಯತೆಯನ್ನು ವಿವರಿಸುತ್ತಾ ಅನೇಕ ಪುಣ್ಯ ನದಿಗಳಿಂದ, ಪುಣ್ಯಕ್ಷೇತ್ರಗಳಿಂದ ಕಂಗೊಳಿಸುವ ಈ ಪುಣ್ಯಭೂಮಿಯಲ್ಲಿ ನಾವು ಜನ್ಮಿಸಿರುವುದಕ್ಕೆ ಭಗವಂತನಿಗೆ ಕೃತಜ್ಞತೆಯನ್ನರ್ಪಿಸುತ್ತಾ, ಶ್ರೀ ಕ್ಷೇತ್ರಕ್ಕೆ ಭೇಟಿಯಿತ್ತ ಸಮಾಜ ಬಾಂಧವರಿಗೆ ಹಾಗೂ ಭಕ್ತವೃಂದವರಿಗೆ ಶ್ರೀ ಕ್ಷೇತ್ರದ ಅಧಿದೇವತೆ ಶ್ರೀ ಕಾಮಾಕ್ಷಿ ಶಾರದಾಂಬೆಯರು ಪೂರ್ಣಾನುಗ್ರಹವನ್ನಿತ್ತು ನಡೆಸಲೆಂದು ಹಾರೈಸಿದರು. ಬೆಂಗಳೂರು, ಮೈಸೂರು, ಪುತ್ತೂರು, ಮಂಗಳೂರು, ಉಡುಪಿ, ಸುಳ್ಯ, ಚೆನ್ನೈ ಮುಂತಾದ ಕಡೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಜನಸ್ತೋಮವನ್ನು ಕಂಡು ಹರ್ಷಿತರಾದರು. ಭಕ್ತ ಜನಸ್ತೋಮದಿಂದ ಶ್ರೀ ಶ್ರೀ ಗಳಿಗೆ ಹೊರೆ ಕಾಣಿಕೆಗಳನ್ನು ಸಮರ್ಪಿಸಲಾಯಿತು. ಶ್ರೀ ಶ್ರೀ ಗಳು ನೆರೆದ ಭಕ್ತಾಭಿಮಾನಿಗಳಿಗೆ ಫಲ ಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸಿದರು. ಶ್ರೀ ಮಠದ ವತಿಯಿಂದ ಎಲ್ಲರಿಗೂ ವಿಶೇಷವಾದ ಪ್ರಸಾದ ಭೋಜನವನ್ನೇರ್ಪಡಿಸಲಾಗಿತ್ತು.



ಸುದೀರ್ಘ 37 ವರ್ಷದ ಸೇವೆಯ ನಂತರ ಕೇರಳ ಗ್ರಾಮೀಣ ಬ್ಯಾಂಕ್‌ನ ಕಾಸರಗೋಡು ಶಾಖೆಯಿಂದ ನಿವೃತ್ತರಾದ ಮನೋಹರ ಎರಿಕ್ಕಳ ಅವರನ್ನು ಬ್ಯಾಂಕ್‌ನ ವತಿಯಿಂದ ಸನ್ಮಾನಿಸಲಾಯಿತು. ಸ್ಥಾನಿಕ ಬ್ರಾಹ್ಮಣ ಸಭಾ ಕಾಸರಗೋಡು ಇದರ ಕಾರ್ಯದರ್ಶಿಯಾಗಿಯೂ ಅವರು ಸೇವೆ ಸಲ್ಲಿಸಿದ್ದು, ಈ ಸಂದರ್ಭದಲ್ಲಿ ಸಭಾದ ಶುಭಕರ ಶ್ಯಾನುಭೋಗ್, ಗೋಪಾಲಕೃಷ್ಣ ಶ್ಯಾನುಭೋಗ್ ಬಾರಿಕ್ಕಡು, ಸುಕುಮಾರ ಆಲಂಪಾಡಿ, ಪ್ರಭಾಶಂಕರ ಪ್ರಭಾವತಿ ಮಧೂರು, ಸುಮಂಗಳ ಮನೋಹರ ಮೊದಲಾದವರು ಉಪಸ್ಥಿತರಿದ್ದರು.



ತಾ.12-06-2017ರಂದು ಪಡುಬಿದ್ರಿ ಸಂಘದ ವಾರ್ಷಿಕೋತ್ಸವದಲ್ಲಿ ಬೆಂಗಳೂರಿನ ಶ್ರೀ ವಿಜಯಕುಮಾರ್ ದಂಪತಿಗಳಿಗೆ ಸನ್ಮಾನಿಸಿದ ಸಂದರ್ಭ.


With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org